ಮನವಿಗಳು

ರಾಜ್ಯಪಾಲರ ಬಗ್ಗೆ ಮುಖ್ಯ ಮಂತ್ರಿಗಳು ಹೇಳಿದ ಹೇಳಿಕೆ

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈವೊತ್ತಿನ ದಿವಸ ನಾನು ಒಂದು ನೋಟೀಸನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ. ಈ ದಿನದ ಅಂದರೆ ತಾರೀಖು ೧೭-೮-೮೩ ರಂದು ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬ್ಯಾನರ್ಜಿ ಪ್ರೊಟೆಸ್ಟ್ಸ್—ಸಿ. ಎಂ. ರಿಮೆಂಬರ್ಸ್ ಎಂದು ಹೆಡ್ಡಿಂಗ್ ನಲ್ಲಿ ಬಂದಿರತಕ್ಕಂಥಾ ವಿಚಾರದ ಬಗ್ಗೆ ನೋಟೀಸ್ ಕೊಟ್ಟಿದ್ದೇನೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಮ್ಮ ರಾಜ್ಯ ಸರ್ಕಾರದ ನೆರವು ಪಡೆದರತಕ್ಕಂಥಾ ಈ ಒಂದು ಸೆಂಟ್ರಲ್ ಸ್ಪೇಟ್ ರಿಲೇಷನ್ಸ್ ಬಗ್ಗೆ ನಾನು ಕೆಲವೊಂದು ವಿಚಾರವನ್ನು ಪ್ರಸ್ತಾಪ ಮಾಡ ಬೇಕಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ರಾಜ್ಯಪಾಲರ ನಡವಳಿಕೆ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಸಂವಿಧಾನದ ಪ್ರಕಾರ ಅವಕಾಶ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾನು ರಾಜ್ಯಪಾಲರ ನಡತೆ ಬಗ್ಗೆ ಕೇಳಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸಂವಿಧಾನದ ಪ್ರಕಾರ ಅವರ ನಡವಳಿಕೆ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಾನು ಈ ಸಭೆಯ ನಿಯಮಾವಳಿಗಳ ಪ್ರಕಾರ ತಮಗೆ ಒಂದು ನೋಟೀಸ್ ಕಳುಹಿಸಿದ್ದೇನೆ. ನಾನು ಪ್ರಸ್ತಾಪ ಮಾಡತಕ್ಕಂಥಾ ವಿಷಯ ರಾಜ್ಯಪಾಲರ ನಡವಳಿಕೆಗಳ ಮೇಲೆ ಅಲ್ಲ.

ಅಧ್ಯಕ್ಷರು.—ತಾವು ನೋಟೀಸ್ ಕಳುಹಿಸಿರುವುದನ್ನು ನಾನು ನೋಡಿದ್ದೇನೆ. ಮುಖ್ಯಮಂತ್ರಿಗಳು ಈ ಸಭೆಗೆ ಬಂದ ಮೇಲೆ ತಾವು ಮಾತನಾಡಿದರೆ ಹೆಚ್ಚು ಅನುಕೂಲವಾಗಬಹುದು. ಆದ್ದರಿಂದ ಸ್ವಲ್ಪ ಸಮಯ ಬಿಟ್ಟು ಆಮೇಲೆ ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಮಾನ್ಯ ಮುಖ್ಯಮಂತ್ರಿಗಳು ಈ ಸಭೆಗೆ ಯಾವಾಗ ಬರುತ್ತಾರೆ ? ನಿನ್ನೆ ದಿವಸ ನಾನು ಅವರ ಮುಖವನ್ನೆ ನೋಡಲಿಲ್ಲ.

ಅಧ್ಯಕ್ಷರು.—ಅವರು ವಿಧಾನಪರಿಷತ್ತಿನಲ್ಲಿದ್ದಾರೆ. ಬರುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಆ ಸದನಕ್ಕೆ ಅವರು ಹೋಗಬಾರದು ಅಂತ ನಾನು ಹೇಳುತ್ತಾ ಇಲ್ಲ. ನಿನ್ನೆ ದಿವಸ ಅವರು ಈ ಸಭೆಗೆ ಮುಖವನ್ನೇ ತೋರಿಸಲಿಲ್ಲ. ಅವರು ಈವೊತ್ತೂ ಕೂಡ ಬರುತ್ತಾರೋ ಇಲ್ಲವೋ ಗೊತ್ತಿಲ್ಲ ಆದ್ದುದರಿಂದ ಅವರು ಯಾವಾಗ ಈ ಸಭೆಗೆ ಬರುತ್ತಾರೆ ಮತ್ತು ಇದನ್ನು ಯಾವಾಗ ಪ್ರಸ್ತಾಪ ಮಾಡಬಹುದು ಅನ್ನುವುದನ್ನಾದರೂ ಹೇಳುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ನಮ್ಮ ಮುಖ ನೋಡಿದರೆ ಸಾಕಲ್ಲಾ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಮುಖ ನೋಡಿದರೆ ಏನೂ ಪ್ರಯೋಜನ ಇಲ್ಲ. ನಿಮ್ಮ ಮುಖ ನೋಡಿದರೆ ಚೆನ್ನಾಗಿ ಉದ್ಧಾರವಾಗಬಹುದು.

ಶ್ರೀ ಎ. ಲಕ್ಷ್ಮೀಸಾಗರ್.—ಇವರ ಮುಖ ನೋಡಬಾರದು ಅಂತ ತಾವೇನಾದರೂ ಪ್ರತಿಜ್ಞೆ ಮಾಡಿದ್ದೀರಾ ?

ಶ್ರೀ ಎಸ್. ಬಂಗಾರಪ್ಪ.—ಪ್ರತಿಜ್ಞೆ ಮಾಡುವವರೆಗೆ ನಾನು ಹೋಗಿಲ್ಲಾ. ಬಹಳ ಸಂತೋಷದ ವಿಚಾರ, ತಮ್ಮ ಅಭಿಪ್ರಾಯ ಏನು ಇದೆ ಅದನ್ನು ನಾನು ಒಪ್ಪುತ್ತೇನೆ. ಮಾನ್ಯ ಅಧ್ಯಕ್ಷರನ್ನು ನಾನು ಕೇಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಈ ಸಭೆಗೆ ಯಾವಾಗ ಬರುತ್ತಾರೆ ಅನ್ನುವ ಗ್ಯಾರಂಟಿ ತಮಗೆ ಗೊತ್ತಿದ್ದರೆ, ಆ ಸಂದರ್ಭವನ್ನು ತಾವು ಹೇಳಿದರೆ ಅವರು ಬಂದ ಹೊತ್ತಿಗೇನೇ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು.—ತಾವು ರೂಲು ೩೩ಳಿರ ಪ್ರಕಾರ ಕಳುಹಿಸಿದಂಥ ನೋಟೀಸ್ ನನ್ನ ಗಮನಕ್ಕೆ ಬಂದಿದೆ. ಈ ವಿಚಾರ ಗಂಭೀರವಾದುದು. ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ತಾವೆಲ್ಲರೂ ತೀರ್ಮಾನ ಮಾಡಿದರೆ ಆ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡೋಣ ಎಂದು ನನ್ನ ಅಭಿಪ್ರಾಯ. ಆದುದರಿಂದ ಅವರು ಬರುವವರೆಗೆ ಸ್ವಲ್ಪ ಸಮಯ ಕೊಡಿ.

ಶ್ರೀ ಎಸ್. ಬಂಗಾರಪ್ಪ.—ಅವರು ಯಾವಾಗ ಬರುತ್ತಾರೆ ಸ್ವಾಮಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಮುಖ್ಯ ಮಂತ್ರಿಗಳು ವಿಧಾನ ಪರಿಷತ್ತಿಗೆ ಹೋಗಿದ್ದಾರೆ. ಸ್ವಲ್ಪ ಸಮಯ ಕೊಡಿ. ಅವರು ಇಲ್ಲಿಗೆಬಂದೇ ಬರುತ್ತಾರೆ,ಬರಲೇ ಬೇಕಾಗುತ್ತದೆ. ಅವರು ಬರುವುದಕ್ಕೆ ಸ್ವಲ್ಪ ಸಮಯಬೇಕಾಗುತ್ತದೆಂದು ನಾನು ಹೇಳುತ್ತೇನೆ.

ಶ್ರೀ ಎಸ್.ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ. ನಾವೂ ಸಹ ಆ ರೀತಿಯ ಸಂಶಯವನ್ನು ಪಡಬೇಕಾಗಿಲ್ಲ. ನಮಗೆ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಗೆ ಬರುತ್ತಾರೆಂದು ಗ್ಯಾರಂಟಿ ಇದೆ. ಅವರು ಮೇಲ್ಮನೆಗೆ ಹೋಗುವುದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ಅವರು ಇಲ್ಲಿಗೆ ಬಂದ ತಕ್ಷಣ ಈ ವಿಷಯವನ್ನು ನಾನು ಪ್ರಸ್ತಾಪಮಾಡಲಿಕ್ಕೆ ತಾವು ನಮಗೆ ಅವಕಾಶ ಮಾಡಿಕೊಡಬೇಕು. ಇವತ್ತು ಬೇಡಿಕೆಗಳ ಮೇಲೆ ಚರ್ಚೆ ಪ್ರಾರಂಭವಾಗುವುದರಿಂದ ಆಮೇಲೆ ಈ ವಿಷಯವನ್ನು ನಾವು ಎತ್ತುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು.—ತಾವು ರೂಲ್ ೩೩ಳಿರ ಪ್ರಕಾರ ನೋಟೀಸನ್ನು ಕೊಟ್ಟಿದ್ದೀರಿ. ನಿಮ್ಮ ನೋಟೀಸ್ ಲ್ಯಾಪ್ಸ್ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಆ ಪ್ರಶ್ನೆಯಿಲ್ಲ. ನಾವು ಇಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ಆ ವಿಷಯದ ಬಗ್ಗೆ ನಾವು ಸೂಕ್ತ ಗಮನಕೊಟ್ಟು ಇಲ್ಲಿ ಮಾತನಾಡುತ್ತೇವೆ. ನಿನ್ನೆಯ ದಿವಸ ಮಹಾರಾಷ್ಟ್ರ ಮುಖ್ಯಮಂತ್ರಿಗಳು ಮತ್ತು ನಮ್ಮ ಮುಖ್ಯಮಂತ್ರಿಗಳು ಮಾತನಾಡಿರತಕ್ಕ ವಿಚಾರವನ್ನು ನಾನೂ ಇಲ್ಲಿ ಪ್ರಸ್ತಾಪ ಮಾಡಿಲ್ಲ. ಆದರೆ ಇದೂ ಕೂಡ ಅಷ್ಟೇ ಪ್ರಾಮುಖ್ಯವಾದುದು. ನಾನು ಕೊಟ್ಟಂಥ ನೋಟೀಸ್‌ನ್ನು ತಾವು ಇಂದಿನ ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿಸಿಲ್ಲ. ತಾವು ಇದನ್ನು ರೂಲ್ ೩೩ಳಿರ ಪ್ರಕಾರ ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿಸುತ್ತೀರಿ ಎನ್ನುವಂಥ ನಂಬಿಕೆಯನ್ನು ನಾನು ಇನ್ನೂ ಕಳೆದುಕೊಂಡಿಲ್ಲ.

ಅಧ್ಯಕ್ಷರು.—ತಾವು ನಂಬಿಕೆಯನ್ನು ಕಳೆದುಕೊಳ್ಳುವುದಕ್ಕೆ ಕಾರಣವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾನು ಆ ರೀತಿಯ ಆಸೆಯನ್ನು ಇಡುವುದಕ್ಕೆ ಕಾರಣ ಇದೆ. ಆದ್ದರಿಂದಲೇ ನಾನು ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಇದಲ್ಲದೆ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಂತೆ ಇರುವ ಸಮಸ್ಯೆಗಳಾದ ಬಾಗಲಕೋಟೆಯ ವಿಷಯದಲ್ಲಿ ರಾಜ್ಯ ಸರ್ಕಾರದ ತೀರ್ಮಾನ, ರೈತರ ವಿಚಾರದಲ್ಲಿ—ಪೋಲೀಸ್ ಬಂದೋಬಸ್ತ್‌ನ್ನು ಉಪಯೋಗ ಮಾಡಿ ರೈತರ ಮೇಲೆ ದಬ್ಬಾಳಿಕೆ ಮಾಡಿ ಅವರನ್ನು ಸಂಪೂರ್ಣವಾಗಿ ಸದೆ ಬಡೆಯುತಕ್ಕದ್ದು ರಾಜ್ಯದಲ್ಲಿ ಹಲವಾರು ಕಡೆಯಲ್ಲಿ ನಡೆದಿದೆ. ಈ ವಿಚಾರದಲ್ಲಿಯೂ ಕೂಡ ನಾನು ನೋಟೀಸನ್ನು ಕೊಟ್ಟಿದ್ದೇನೆ. ಇವೆಲ್ಲ ಪ್ರಶ್ನೆಗಳಿಗೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕಾಗಿದೆ. ಆದ್ದರಿಂದ ನಾನು ಈ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡದಿದ್ದರೆ ನಮ್ಮಗಳ ಹಕ್ಕುಗಳ ಪ್ರಶ್ನೆ ಏನಾಗುತ್ತದೆ ಎಂಬುದನ್ನು ತಾವು ದಯವಿಟ್ಟು ಗಮನಿಸಬೇಕು ಮತ್ತು ನಮಗೆ ಸಂಪೂರ್ಣವಾದ ರಕ್ಷಣೆಯನ್ನು ಕೊಡಬೇಕು.

ಅಧ್ಯಕ್ಷರು.—ತಾವು ಕೆಲವು ವಿಷಯಗಳ ಬಗ್ಗೆ ಸದನದ ಹಾಗೂ ಸರ್ಕಾರದ ಗಮನವನ್ನು ಸೆಳೆದಿದ್ದೀರಿ. ತಾವು ಇವುಗಳಿಗೆ ಉತ್ತರಬೇಕೆಂದು ಒತ್ತಾಯ ಮಾಡುವುದು ಸಾಧ್ಯವಿಲ್ಲ. ತಾವು ಕೊಟ್ಟ ನೋಟೀಸ್ ಈಗ ತಾನೆ ನನ್ನ ಕೈಗೆ ಬಂದಿದೆ. ಸುಮಾರು ೧೧–೪೦ಕ್ಕೆ ತಾವು ಕೊಟ್ಟ ನೋಟೀಸ್ ನನ್ನ ಕಚೇರಿಯ ಮೂಲಕ ಬಂದಿದೆ.

ಶ್ರೀ ಎಸ್. ಬಂಗಾರಪ್ಪ.— ಈ ದಿವಸ ಕೂಡ ಒಂದು ನೋಟೀಸನ್ನು ಕೊಟ್ಟಿದ್ದೇನೆ ? ತಾವು ೧೧–೪೦ಕ್ಕೆ ಎಂದರೆ, ನಾನು ಇಲ್ಲಿಗೆ ಬಂದ ತಕ್ಷಣವೇ ನೋಟೀಸನ್ನು ಕೊಟ್ಟಿದ್ದೇನೆ.

ಶ್ರೀ ಪಿ. ರಾಮಂದೇವ್.—ಮಾನ್ಯ ಬಂಗಾರಪ್ಪನವರು ಪ್ರಾಮುಖ್ಯವಾದ ವಿಚಾರಗಳ ಬಗ್ಗೆ ಚರ್ಚೆಯಾಗಬೇಕು ಎಂದು ಹೇಳಿದರೆ ಸರ್ಕಾರದವರು ಅದಕ್ಕೆ ಸದಾ ಸಿದ್ಧರಿದಾರೆ.

ಅಧ್ಯಕ್ಷರು.—ತಾವು ಪತ್ರಿಕಾ ವರದಿಯನ್ನು ಆರಿದಸಿ ಸಂವಿಧಾನಾತ್ಮಕ ವಿಚಾರವನ್ನು ಎತ್ತಿದ್ದೀರಿ, ಇದರ ಬಗ್ಗೆ ನಾವು ಸತ್ಯಸಂಗತಿಯನ್ನು ತಿಳಿಯಬೇಕಾದರೆ ನಾವು ಸರ್ಕಾರದ ಜೊತೆಗೆ ಇದನ್ನು ಆಲೋಚನೆ ಮಾಡಬೇಕಾಗುತ್ತದೆ. ಅದಕ್ಕಾಗಿ ತಾವು ನಮಗೆ ಸ್ವಲ್ಪ ಸಮಯವನ್ನು ಕೊಡಿ. ನಾನು ಈ ವಿಷಯವನ್ನು ಮಾನ್ಯಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ಈ ವಿಚಾರದಲ್ಲಿ ಸತ್ಯ ಸಂಗತಿಯನ್ನು ತಿಳಿಯತಕ್ಕದ್ದು ಮತ್ತು ಅವರಿಂದ ಉತ್ತರವನ್ನು ಪಡೆಯತಕ್ಕದ್ದು ಒಂದು ಭಾಗ, ಇನ್ನೊಂದು ಭಾಗ ಸತ್ಯಸಂಗತಿಯನ್ನು ಸದನದಲ್ಲಿ ಹೇಳತಕ್ಕದ್ದು ಸದಸ್ಯರ ಹಕ್ಕು. ಈ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು ಸೆಮಿನಾರನ್ನು ಉದ್ಘಾಟನೆ ಮಾಡತಕ್ಕ ಸಂದರ್ಭದಲ್ಲಿ ಕೊಟ್ಟರತಕ್ಕ ಹೇಳಿಕೆಯು ವಿಚಾರ ಪ್ರಾಮುಖ್ಯವಾದುದು. ಈ ಸದನದಲ್ಲಿ ನಾನು ಅದನ್ನು ಪ್ರಸ್ತಾಪ ಮಾಡುವುದಕ್ಕೆ ರೂಲ್ ೩೩ರ ಪ್ರಕಾರ ನೋಟೀಸನ್ನು ಕೊಟ್ಟಿದ್ದೇನೆ ಇದರ ವಿವರಗಳನ್ನು ಈಗ ಕೊಡುವುದಕ್ಕೆ ಹೋಗಿಲ್ಲ, ಮತ್ತು ಇರುವಂಥ ಸತ್ಯಸಂಗತಿಯನ್ನು ಹೇಳುವುದಕ್ಕೆ ಹೋಗಿಲ್ಲ. ವಿಷಯವನ್ನು ಮಾತ್ರ ಪ್ರಸ್ತಾಪಮಾಡಿದ್ದೇನೆ. ತಾವು ಸರ್ಕಾರದ ಪರವಾಗಿ ಸತ್ಯಸಂಗತಿಯನ್ನು ತಿಳಿಯಬೇಕೆಂದು ತೀರ್ಮಾನ ಮಾಡಿದ್ದರೆ ಈಸದನದಲ್ಲಿ ನಮಗೆ ಇರತಕ್ಕ ಹಕ್ಕನ್ನು ನಾವು ಪ್ರತಿಪಾದನೆ ಮಾಡಬೇಕಾಗುತ್ತದೆ. ತಾವು ಅವರ ವಿಚಾರವನ್ನು ಮತ್ತು ನಮ್ಮ ವಿಚಾರವನ್ನು ತಿಳಿದುಕೊಂಡರೆ ಇದನ್ನು ಚರ್ಚೆಗೆ ಯಾವರೀತಿಯಾಗಿ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಒಂದು ತೀರ್ಮಾನಕ್ಕೆ ಬರುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಪತ್ರಿಕೆಯಲ್ಲಿ ಇದರ ಬಗ್ಗೆ ಈ ರೀತಿಯಾಗಿ ವರದಿ ಬಂದಿದೆ. ''Governor A. N. Banerji refuted the impression in the minds of some people that the Governor was a glorified servant of the Government at the Centre.....''

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಈ ಸಮಯದಲ್ಲಿ ಈ ಬಗ್ಗೆ ಕ್ರಿಯಾಲೋಪವನ್ನು ಎತ್ತುತ್ತೇನೆ. ಏಕೆಂದರೆ ಕಾನ್ಸ್‌ಟಿಟ್ಯೂಷನ್ ಪ್ರಕಾರ ರಾಜ್ಯಪಾಲರ ವಿಚಾರವನ್ನು ಸಭೆಯಲ್ಲಿ ಚರ್ಚೆಮಾಡುದಕ್ಕೆ ಅವಕಾಶವಿಲ್ಲ. ಆದ್ದರಿಂದ ಇದನ್ನು ತಾವು ಗಣನೆಗೆ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಇದನ್ನು ತಾವು ಪ್ರಾಮುಖ್ಯವಾದ ವಿಚಾರವೆಂದು ತಿಳಿದು ಚರ್ಚೆಗೆ ಅವಕಾಶ ಕೊಟ್ಟರೆ ಅದು ಎಲ್ಲಿಂದ ಎಲ್ಲಿಗೊ ಹೋಗುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಇದಕ್ಕೆ ತಾವು ಅವಕಾಶ ಕೊಡುವುದು ಬೇಡ ಎಂದು ತಮ್ಮಲ್ಲಿ ನಾನು ಆರಿಕೆ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಇದಕ್ಕೆ ಸಂಬಂಧಿಸಿದ ಆರ್ಟಿಕಲ್‌ನ್ನು ತಾವು ಪರಾಂಬರಿಸಿದರೆ ತಮಗೆ ಗೊತ್ತಾಗಬಹುದು.

ಶ್ರೀ ಎಸ್. ಬಂಗಾರಪ್ಪ.—ನಾನೂ ಸಹ ಇದಕ್ಕೆ ಸಂಬಂಧಪಟ್ಟ ಕಾನೂನನ್ನು ಓದಿದ್ದೇನೆ. ನಾನು ಇಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲ ಎನ್ನತಕ್ಕ ಮಾತನ್ನು ಮಾನ್ಯ ಲಕ್ಷ್ಮೀಸಾಗರ್ ಅವರು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ತಾವು ಇದರ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುವ ಹಾಗಿದ್ದರೆ ಮತ್ತು ಮಾನ್ಯ ಸಚಿವರು ಏನು ಕ್ರಿಯಾಲೋಪವನ್ನು ಎತ್ತಿದ್ದಾರೆ ಅದರ ಬಗ್ಗೆ ನಿರ್ಣಯವನ್ನು ಕೊಡುವ ಹಾಗಿದ್ದರೆ ನನಗೂ ಸಹ ಇಲ್ಲಿ ಮಾತನಾಡುವುದಕ್ಕೆ ಅವಕಾಶಕೊಡಬೇಕು. ಮುಖ್ಯಮಂತ್ರಿಗಳು ಈಗತಾನೆ ಬಂದಿದ್ದಾರೆ. ಆದ್ದರಿಂದ ನಾವು ಈ ವಿಷಯವನ್ನು ಇಲ್ಲಿ ಪ್ರಸ್ತಾಪಮಾಡಬಹುದೇ ?

ಅಧ್ಯಕ್ಷರು.—ರೂಲ್ ೩೩ರ ಪ್ರಕಾರ ನೋಟೀಸ್ ಕೊಡುವುದರ ಮೂಲಕ ಈ ವಿಷಯದ ಬಗ್ಗೆ ತಾವುಗಳು ನನ್ನ ಗಮನವನ್ನು ಸೆಳೆದಿದ್ದೀರಿ. ಇದು ಬಹಳ ಸೂಕ್ಷ್ಮವಾದ ವಿಚಾರ ಎನ್ನುವುದನ್ನು ತಾವೂ ಸಹ ಒಪ್ಪುತ್ತೀರಿ. ಆದ್ದರಿಂದ ಮುಖ್ಯಮಂತಿಗಳೊಂದಿಗೆ ಇದನ್ನು ಸಮಾಲೋಚಿಸಿ ಒಂದು ನಿರ್ಣಯ ಮಾಡೋಣ.

ಶ್ರೀ ರಾಮಕೃಷ್ಣ ಹೆಗಡೆ.—ಸಭೆಯಲ್ಲಿ ರಾಜ್ಯಪಾಲರ ಯಾವುದೇ ಹೇಳಿಕೆಯ ಬಗ್ಗೆ ನಮ್ಮ ನಿಯಮಾವಳಿಗಳಲ್ಲಿರುವ ಯಾವುದೇ ಕಲಂನ ಕೆಳಗೆ ಚರ್ಚೆಗೆ ಅಸ್ಪದ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಅದು ತಪ್ಪು.

ಶ್ರೀ ರಾಮಕೃಷ್ಣ ಹೆಗಡೆ.—ರಾಜ್ಯಪಾಲರ ಯಾವುದೇ ಹೇಳಿಕೆಯ ಬಗ್ಗೆ ನಮ್ಮ ನಿಯಮಾವಳಿಗಳಲ್ಲಿ ಚರ್ಚೆಗೆ ಆಸ್ಪದ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ಇದು ಮಾನ್ಯ ಸದಸ್ಯರ ಅಭಿಪ್ರಾಯದಲ್ಲಿ ಆಸ್ಪದ ಇರಬಹುದು. ನನ್ನ ಅಭಿಪ್ರಾಯದಲ್ಲಿ ಇದಕ್ಕೆ ಆಸ್ಪದ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಯಾವ ವಿವರಗಳನ್ನೂ ಹೇಳದಿದ್ದರೆ ಅವರು ಹೇಗೆ ಉತ್ತರ ಕೊಡುತ್ತಾರೆ ? ಮಾನ್ಯ ರಾಜ್ಯಪಾಲರ ನಡವಳಿಕೆಯ ವಿಚಾರದಲ್ಲಿ ಚರ್ಚೆಗೆ ಈ ಸದನದಲ್ಲಿ ಆಕ್ಷೇಪ ಇದೆ. ಇದರ ಬಗ್ಗೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ ನಾನು ಹೇಳತಕ್ಕ ವಿಚಾರವೇ ಬೇರೆ. ನಾನು ಏನನ್ನು ಹೇಳಬೇಕಾಗಿದೆಯೋ ಅದನ್ನು ಇನ್ನೂ ಹೇಳಿಲ್ಲ. ಈ ಮಾತನ್ನು ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ ನಾನು ಹೇಳುವುದು ಸರಿಯಲ್ಲವೆಂದು ಅನಂತರ ಹೇಳುವುದು ತಮ್ಮ ಅಧಿಕಾರ. ಆದರೆ ಸದನದಲ್ಲಿ ರಾಜ್ಯಪಾಲರ ಮಾತನ್ನೇ ಎತ್ತಬಾರದು ಎನ್ನುವ ಧಾಟಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳತಕ್ಕದ್ದು ಸರಿಯಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ತೀರ್ಮಾನ ಮಾಡಿದ್ದೀರಾ ?

ಅಧ್ಯಕ್ಷರು.—ಇದರ ಬಗ್ಗೆ ಸ್ವಲ್ಪ ಸಮಯ ಅವಕಾಶ ಕೊಡಿ ಎಂದು ಮಾತ್ರ ಮಾನ್ಯ ಸದಸ್ಯರಿಗೆ ನಾನು ಹೇಳುತ್ತಿದ್ದೇನೆ.

ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಮಾನ್ಯ ರಾಜ್ಯಪಾಲರು ರಿಆಕ್ಟ್ ಮಾಡಿದ್ದಾರೆ ಎನ್ನುವ ಮಾತನ್ನು ಈಗ ತಾವೇ ಹೇಳಿದ್ದೀರಿ. ಅಂದಮೇಲೆ ಇಲ್ಲಿ ರಾಜ್ಯಪಾಲರ ಕಾಂಡಕ್ಟ್ ಪ್ರಶ್ನೆ ಬರುವುದಿಲ್ಲವೇ. ಈ ವಿಚಾರವಾಗಿ ಪರಿಶೀಲನೆಗಾಗಿ ಸ್ವಲ್ಪ ಸಮಯ ಕೊಡಿ ಅಂದಮೇಲೆ ಕೂಡ ಪುನ: ಇದನ್ನು ಪ್ರಸ್ತಾಪ ಮಾಡಿದರೆ ಮುಂದೆ ಚರ್ಚೆಗೆ ಅವಕಾಶ ಸಿಕ್ಕಲಾರದಂಥ ಪರಿಸ್ಥಿತಿ ಬರಬಹುದು. ಆದುದರಿಂದ ಇಂತಹ ವಿಚಾರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಒಳ್ಳೆಯದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಕಾಂಡಕ್ಟ್ ಪ್ರಶ್ನೆ ಇಲ್ಲಿ ಬರುತ್ತದೆ ಅಥವಾ ಬರುವುದಿಲ್ಲ ಎನ್ನತಕ್ಕ ತೀರ್ಮಾನವನ್ನು ತಾವು ನಾನು ಮೊದಲೇ ಹೇಳಿದಂತೆ ನಿಯಮ ೩೩೪ರ ಪ್ರಕಾರ ಮಾಡಬೇಕು. ಇಲ್ಲಿ ರಾಜ್ಯಪಾಲರ ಕಾಂಡಕ್ಟ್ ವಿಚಾರ ಬರುವ ಹಾಗಿದ್ದರೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನಾನು ತಮ್ಮೆದುರಿಗೆ ಪ್ರಸ್ತಾಪ ಮಾಡುತ್ತಾ ಇರುವುದು ಏನೆಂದರೆ ಸೆಂಟ್ರಲ್ ಅಂಡ್ ಸ್ಟೇಟ್ ರಿಲೇಷನ್‌ಶಿಪ್ ವಿಚಾರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಧ್ಯೆ ಹಲವಾರು ಬಗೆಯ ಸಂಬಂಧ ಇರಬೇಕಾಗುತ್ತದೆ. ಈ ವಿಚಾರದಲ್ಲಿ ಈಗ ಕೆಲವು ದಿನಗಳ ಹಿಂದೆ ಮಾನ್ಯ ಮುಖ್ಯ ಮಂತ್ರಿಗಳು.....

MR. SPEAKER.—I have not allowed for discussion.

ಶ್ರೀ ಎಸ್. ಬಂಗಾರಪ್ಪ.—ಡಿಸ್ಕಷನ್‌ಗೆ ತಾವು ಅಲೋ ಮಾಡಿಲ್ಲ, ಆ ವಿಚಾರ ನನಗೆ ಗೊತ್ತಿದೆ. ನಿಯಮ ೩೩೪ರ ಪ್ರಕಾರ ತಾವು ಡಿಸ್ಕಷನ್‌ಗೆ ಪರ್ಮಿಷನ್ ಕೊಡಬೇಕಾಗುತ್ತದೆ. ಆದರೆ ಪರ್ಮಿಷನ್ ಕೊಡಬೇಕು ಅಥವಾ ಬಿಡಬೇಕು ಎಂದು ತೀರ್ಮಾನ ಮಾಡುವುದು ತಾವು. ಅದಕ್ಕೆ ಪೂರ್ವಭಾವಿಯಾಗಿ ಕೆಲವು ವಿಚಾರಗಳನ್ನು ನಾನು ಹೇಳಬೇಕಾಗಿದೆ.

SRI A. LAKSHMI SAGAR.—I am on a point of order. Now you have received the notice of a matter to be discussed under Rule 334 and you were good enough to mention that this requires consideration by you. There is also a point, a Constitutional point viz., any matter connected with the conduct of the Governor including a statement purported to have been made cannot also be a matter that can form a

subject matter of discussion on the floor of this House. All these matters are barred by the Constitutional previsions. This is point Number One, on which I have already made it clear. The second point I should like you to kindly examine is this. You have got to satisfy yourself.

ಒಬ್ಬ ಸದಸ್ಯರು.—ಕನ್ನಡದಲ್ಲಿ ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ನನ್ನ ಎರಡನೆಯ ಭಾಗ ಏನೆಂದರೆ ತಾವು ಇದರ ಬಗ್ಗೆ ಈ ಸಭೆಯಲ್ಲಿ ಚರ್ಚೆಗೆ ಅವಕಾಶ ಕೊಡುವುದಕ್ಕೆ ಮೊದಲು ಮಾನ್ಯ ಸದಸ್ಯರು ಏನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ, ಅದು ಸಂವಿಧಾನಾತ್ಮಕವಾಗಿದೆಯೇ. ನಮ್ಮ ನಿಯಮಗಳಿಗೆ ಅನುಗುಣವಾಗಿದೆಯೇ ಎನ್ನುವುದನ್ನು ತೀರ್ಮಾನ ಮಾಡಿದ ನಂತರ ಈ ಸಭೆಯಲ್ಲಿ ಇನ್ನು ಮುಂದೆ ಅದರ ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶ ಕೊಡಬೇಕು, ಅಲ್ಲಿಯವರೆಗೆ ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇಲ್ಲ ಎಂಬ ನನ್ನ ಕ್ರಿಯಾಲೋಪವನ್ನು ತಮ್ಮ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದುದರಿಂದ ಇದರ ಬಗ್ಗೆ ತಾವು ನಿರ್ಣಯ ಕೊಡಬೇಕು ಎಂದು ನಾನು ಒತ್ತಾಯಪೂರ್ವಕವಾಗಿ ತಮ್ಮಲ್ಲಿ ಮನವರಿಕೆ ಪಡಿಸುತ್ತಾ ಇದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಸದಸ್ಯರಾದಂಥ ಶ್ರೀಮಾನ್ ಬಂಗಾರಪ್ಪನವರು ನಿಯಮ ೩೩೪ರ ಪ್ರಕಾರ ನೋಟೀಸ್ ಕೊಟ್ಟಿದ್ದಾರೆ, ಅದರ ವಿಚಾರವಾಗಿ ತಮ್ಮ ಗಮನವನ್ನು ಸೆಳೆದಾಗ ತಾವು ಕೂಡ ಈ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಆದ್ದರಿಂದ ಇದರ ಚರ್ಚೆಗೆ ತಾವು ಅವಕಾಶ ಕೊಡಬೇಕಾಗುತ್ತದೆ, ಮತ್ತು ಇದಕ್ಕೆ ಸಮಯವನ್ನು ನಿಷ್ಕರ್ಷೆ ಮಾಡಬೇಕಾಗುತ್ತದೆ, ಇದಕ್ಕೆ ಸಮಯವನ್ನು ನಿರ್ಣಯ ಮಾಡುತ್ತೇನೆ ಎಂದು ತಾವು ಈಗಾಗಲೇ ಹೇಳಿದ್ದೀರಿ. ಮಾನ್ಯ ಸದಸ್ಯರು ಇದನ್ನು ಪ್ರಸ್ತಾಪ ಮಾಡುವಾಗ ಮಾನ್ಯ ಮಂತ್ರಿಮಂಡಲದವರು ಇರಲಿಲ್ಲ. ಅವರು ಇದ್ದಾಗ ವಿಷಯವನ್ನು ಎತ್ತಬೇಕು ಎಂದೂ ಕೂಡ ತಾವು ಹೇಳಿದ್ದೀರಿ. ಈ ವಿಚಾರಕ್ಕೆ ಸಮಯ ಕೊಡಬೇಕು, ರಾಜ್ಯಪಾಲರ ಭಾಷಣ ಇನ್ನಿತರ ವಿಚಾರ ಏನಿದೆ ಅದರ ಪರಿಶೀಲನೆಗೂ ಸಮಯ ಕೊಡಬೇಕು ಎಂದು ಸದನದಲ್ಲಿ ಪ್ರಸ್ತಾಪ ಮಾಡುವಾಗ ಕಾನೂನು ಸಚಿವರಾದ ಶ್ರೀಮಾನ್ ಲಕ್ಷ್ಮೀಸಾಗರ್‌ರವರು ಎರಡು ಸಾರಿ ಕ್ರಿಯಾಲೋಪವನ್ನು ಎತ್ತಿದರು. ಮಾನ್ಯ ರಾಜ್ಯಪಾಲರ ವಿಚಾರದಲ್ಲಿ ಯಾವುದೇ ಒಂದು ವಿಷಯವನ್ನು ಪ್ರಸ್ತಾಪ ಮಾಡಬಾರದು ಎಂದು ಹೇಳಿದರು. ಸದನದ ಕಾರ್ಯಕಲಾಪಗಳನ್ನು ನಿಯಂತ್ರಿಸತಕ್ಕ ನಿಯಮ ೩೨೯. Rule 390 (5) reflect upon the conduct of persons in high authority, unless the discussion is based on a substantive motion drawn in proper terms. The words "persons in high authority" means persons whoso conduct can only be discussed on a substantive motion drawn on proer. terms under the Constitution or such other persou whose conduct in the opinion of the Speaker should be discussed on a substantive motion."

Further Clause (6) says : "Use of the Governor's name for the purpose of influencing the debate."

ಈ ಎರಡು ಉಪ ಕಲಮುಗಳು ಇದಕ್ಕೆ ಹೊಂದಿಕೊಂಡಂಥವು, ಕಾನೂನು ಸಚಿವರಾದ ಶ್ರೀ ಮಾನ್ ಲಕ್ಷ್ಮೀಸಾಗರ್‌ರವರು ಇದನ್ನು ಗಮನದಲ್ಲಿಟ್ಟುಕೊಂಡು ಈ ವಿಚಾರವನ್ನು ಎತ್ತಿದ್ದಾರೆ. ಈಗ ಪ್ರಶ್ನೆ ಏನೆಂದರೆ ಶ್ರೀಮಾನ್ ಬಂಗಾರಪ್ಪನವರು ಯಾವ ಪ್ರಶ್ನೆಯನ್ನು ಎತ್ತಿದ್ದಾರೆ ಅದನ್ನು ವಿಸ್ತರಣೆ ಮಾಡಲಿಕ್ಕೆ ಹೋಗಲಿಲ್ಲ. ಅದಕ್ಕೆ ಈ ಕಲಮಿನಲ್ಲಿ ತಡೆ ಇದೆಯೋ ಇಲ್ಲವೋ ಎನ್ನುವ ವಿಚಾರವನ್ನು ಚರ್ಚೆಮಾಡಬೇಕಾಗುತ್ತದೆ ನಾನು ಅರ್ಥಮಾಡಿಕೊಂಡ ಹಾಗೆ ಶ್ರೀ ಮಾನ್ ಬಂಗಾರಪ್ಪನವರು ಎತ್ತಿದಂಥ ವಿಚಾರವೇನೆಂದರೆ, The Economic Planning Council i e,, Think

Tank ಎಂಬ ಒಂದು ಸೆಮಿನಾರ್ ಆಯಿತು. ಆಗ ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರ ರಾಜ್ಯ ಸಂಬಂಧದ ವಿಚಾರದಲ್ಲಿ ಒಂದು ಭಾಷಣ ಮಾಡಿದರು. ಆಗ Institution of Governorship ಮೇಲೆ ಒಂದುರೀತಿಯಾದ ಕಾಮೆಂಟ್ ಮಾಡಿದ್ದಾರೆ. ರಾಜ್ಯಪಾಲರಾದ ಶ್ರೀಮಾನ್ ಆಶೋಕ್‌ನಾಥ ಬ್ಯಾನರ್ಜಿಯವರ ಮೇಲೆ ಅವರು ಕಾಮೆಂಟ್ ಮಾಡಿಲ್ಲ, ಅವರು ಪ್ರಾಸ್ಟಾವಿಕವಾಗಿ ಹೇಳಿದ್ದಾರೆ.

According to my reading of that report, the Inaugural Speech was made by the Hon'ble Chief Ministerwherein he raised an objection on the Institution of Governor, and not against a specific Governor, It is not against this Governor, or 'a' Governor or 'b' governor or 'c' Governor. It is on the Institution of Governor. ಒಂದು ಇನ್‌ಸ್ಟಿಟ್ಯೂಷನ್ ಮೇಲೆ ಭಾಷಣ ಮಾಡಿದರೆ ಅದು ಈ ಕುಲಮಿನಲ್ಲಿ ಬರುವುದಿಲ್ಲ. Therefore rule Number 309 does not refer to that, according to my reading.

SRI K. G. MAHESWRAPPA.—I am on a point of order.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಇನ್‌ಸ್ಟಿಟ್ಯೂಷನ್ ಆಫ್ ಗವರ್ನರಶಿಪ್ ಮೇಲೆ ಮಾನ್ಯ ಮುಖ್ಯ ಮಂತ್ರಿಗಳು ವಿಮರ್ಶೆಮಾಡಿ ತಮ್ಮ ಭಾಷಣವನ್ನು ಎಕನಾಮಿಕ್ ಪ್ಲಾನಿಂಗ್ ಕೌನ್ಸಿಲ್ ಮುಂದೆ ಇಟ್ಟಿದ್ದಾರೆ. ಅದರ ಬಗ್ಗೆ ತಮ್ಮದೇ ಆದಂಥ ಒಂದು ವೈಯಕ್ತಿಕ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಆದುದರಿಂದ ಇದು ರಾಜ್ಯಪಾಲರಾದ ಆಶೋಕನಾಥ ಬ್ಯಾನರ್ಜಿರವರ ಅಥವಾ ಇನ್ನೊಬ್ಬ ರಾಜ್ಯಪಾಲರ ಪ್ರಶ್ನೆ ಇಲ್ಲಿ ಬರುವುದಿಲ್ಲ. ವೈಯಕ್ತಿಕವಾಗಿ ಅವರ ಹೆಸರನ್ನು ನಾವು ಪ್ರಸ್ತಾಪ ಮಾಡುತ್ತಾ ಇಲ್ಲ. ಶ್ರೀಮಾನ್ ಬಂಗಾರಪ್ಪನವರ ಉದ್ದೇಶವೂ ಕೂಡ ಅದಲ್ಲ. ಮಾನ್ಯ ಮುಖ್ಯ ಮಂತ್ರಿಯವರು ಈ ಸದನಕ್ಕೆ ಜವಾಬ್ದಾರರಾಗಿರುವಾಗ, ಇನ್‌ಸ್ಟಿಟ್ಯೂಷನ್ ಆಫ್ ಗವರ್ನರ್ ಮೇಲೆ ಭಾಷಣ ಮಾಡಿದ ಪರಿಣಾಮವಾಗಿ ಏನು ಸಮಸ್ಯೆ ಉದ್ಭವವಾಗಿದೆ, ಅದರಿಂದ ಆ ಸಂಸ್ಥೆಗಳ ಮೇಲೆ ಏನು ಪರಿಣಾಮವಾಗುತ್ತದೆ, ಅದು ಪ್ರಜಾಭುಭುತ್ವಕ್ಕೆ ಹಿತಕರವೇ ಅಥವಾ ಅಲ್ಲವೇ ಎಂಬ ವಿಚಾರ ಮೂಲಭೂತವಾಗಿ ಬರುತ್ತದೆ. ಮಾನ್ಯ ರಾಜ್ಯಪಾಲರ ಮೇಲೆ ಅಥವಾ ಅವರ ನಡೆತೆಯ ಮೇಲೆ ನಾವು ಇಲ್ಲಿ ಪ್ರಶ್ನೆ ಮಾಡುವುದೂ ಇಲ್ಲ. ಆದ್ದರಿಂದ Before you can give you verdict on that, I would like you to deeply consider these aspects.

ಅಧ್ಯಕ್ಷರು.—ನಿಮ್ಮ ಬಂಗಾರಪ್ಪನವರು ಏನು ನೋಟೀಸ್ ಕಳಿಸಿದ್ದಾರೆ...

ಶ್ರೀ ಎಂ. ವೀರಪ್ಪ ಮೊಯಿಲಿ.—ನಮ್ಮ ಬಂಗಾರಪ್ಪನವರಲ್ಲಿ, ನಿಮ್ಮ ಬಂಗಾರಪ್ಪನವರು.

ಅಧ್ಯಕ್ಷರು.—ಶ್ರೀಮಾನ್ ಬಂಗಾರಪ್ಪನವರು ನಮ್ಮವರೂ ಆಗಿರುತ್ತಾರೆ ಬಿಡಿ. ಶ್ರೀಮಾನ್ ಬಂಗಾರಪ್ಪನವರು ಕಳಿಸಿರತಕ್ಕ ನೋಟೀಸ್ ನಿಮಗೆ ಗೊತ್ತಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಗೊತ್ತಿಲ್ಲ.

ಅಧ್ಯಕ್ಷರು.—ಹಾಗಿದ್ದಮೇಲೆ ಏಕೆವಾದ ಮಾಡುತ್ತೀರಿ, ಸುಮ್ಮನೆ ಸಮಯ ವಿಕೆ ಹಾಳು ಮಾಡುತ್ತೀರಿ.

SRI M. VEERAPPA MOILY.—I am sorry. We are not wasting time here. ತಮ್ಮ ಅರ್ಥದಲ್ಲಿ ನಾವು ಈ ಸದನಕ್ಕೆ ಸಮಯ ಹಾಳು ಮಾಡುವುದಕ್ಕೆ ಬರುತ್ತಿದ್ದೇವೆಯೇ ?

ಶ್ರೀ ಎನ್. ಚಿಕ್ಕೇಗೌಡ.—ಹಾಗಿದ್ದರೆ ಆದರಲ್ಲಿ ತಾವೂ ಭಾಗಿಯಾಗಿದ್ದೀರಿ

ಅಧ್ಯಕ್ಷರು.—ನೋಟೀಸ್ ವಿಷಯ ತಿಳಿದುಕೊಳ್ಳದೆ ಕೇಳುತ್ತಾ ಇದ್ದೀರಿ, ಆದ್ದರಿಂದ ಸಮಯ ವಿಕೆ ಹಾಳುಮಾಡುತ್ತೀರಿ ಎಂದು ಹೇಳಿದೆ.

SRI M. VEERAPPA MOILY.—When the matter has come up here, it is my duty to have my say because it will have far reaching cons-

equences as far as the conduct of this House is concerned. I am entitled to submit on the plea made by Sri Bangarappa.

ಅಧ್ಯಕ್ಷರು.—ಅದಕ್ಕೋಸ್ಕರ ಸಮಯ ಹಾಳುಮಾಡುತ್ತಾ ಇದ್ದೀರಿ ಎಂದು ಹೇಳಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ —ನಾವು ಸಮಯ ಹಾಳು ಮಾಡುವುದಕ್ಕೆ ಇಲ್ಲಿಗೆ ಬರುತ್ತಿದ್ದೇವೆಯೇ ? ಹಾಗಾದರೆ ಏಕೆ ಇಲ್ಲಿ ಬರಬೇಕು ? ತಾವು ಸಮಯ ಹಾಳುಗಡುತ್ತಿದೆ ಎಂದು.....

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ನಿಮಿಷ ಅವಕಾಶ ಕೊಟ್ಟರೆ ನಾನು ಒಂದು ಮಾತನ್ನು ಹೇಳುತ್ತೇನೆ. ಇಲ್ಲಿ ಇದರ ಮೇಲೆ ಇಷ್ಟೆಲ್ಲಾ ಚರ್ಚೆಯಾಗುವ ಅಗತ್ಯವಿಲ್ಲ. ನಾನು ವಿತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ರಾಜ್ಯಪಾಲರ ಹೆಸರನ್ನು ಇಲ್ಲಿ ಶರತ್ತದು ಅನಾವಶ್ಯಕ. ಯಾವ ಒಂದು ಸ್ಟೇಟ್‌ಮೆಂಟ್‌ನ್ನು ನಾನು ಮಾಡಿದ್ದೇನೆ ಅದರ ಮೇಲೆ ಚರ್ಚೆಯಾಗಲಿ. ನಾನು ಸ್ಟೇಟ್‌ಮೆಂಟ್ ಮಾಡಿದ್ದು ನಿಜ. ಅದನ್ನು ಸಿದ್ಧ ಮಾಡಿ ಕೋರಿಸುತ್ತೇನೆ. ಇವತ್ತು ರಾಜ್ಯಪಾಲರ ಹುದ್ದೆಯನ್ನು ಯಾವ ರೀತಿ ಯಾಗಿ ಯಾವ ಒಂದು ದರ್ಜೆಗೆ ಇಳಿಸಲಾಗಿದೆ ಎನ್ನುವುದನ್ನು ಅಂಕಿಸಂಖ್ಯೆಗಳ ಆಧಾರದ ಮೇಲೆ ತೋರಿಸುತ್ತೇನೆ. ಇದು ಒಬ್ಬ ರಾಜ್ಯಪಾಲರ ಬಗ್ಗೆ ನಾನು ಹೇಳಿದ್ದು ಅಲ್ಲ. ಇದರ ಬಗ್ಗೆ ಚರ್ಚೆ ಮಾಡೋಣ, ಆದರೆ ವಿತಕ್ಕೆ ಕೊಂಕಣ ಸುತ್ತಿ ಮೈಲಾರಕ್ಕೆ ಹೋಗುತ್ತೀರಿ? ನೇರವಾಗಿ ಹೇಳಿ, ನಾನು ಅದನ್ನು ಎದುರಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಈಗ ನೇರವಾಗಿ ಚರ್ಚೆ ಮಾಡೋಣವೆಂದು ಮಾನ್ಯ ಮುಖ್ಯಮಂತ್ರಿಗಳವರೇ ಹೇಳುತ್ತಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.— ನನ್ನ ಹೇಳಿಕೆ ನಿಮಗೆ ರುಚಿಯಾಗದೇ ಇರಬಹುದು, ಅದು ನನ್ನ ಅಭಿಪ್ರಾಯವಾಗಿರಬಹುದು ಮತ್ತು ಅದು ನನ್ನ ವೈಯಕ್ತಿಕ ಅಭಿಪ್ರಾಯ, ಅದನ್ನು ವ್ಯಕ್ತ ಮಾಡಿದ್ದೇನೆ, ಅದನ್ನು ಸಮರ್ಥನೆ ಮಾಡಿ ಹಿಂದಕ್ಕೆ ಓಡಿ ಹೋಗತಕ್ಕ ಪ್ರಶ್ನೆ ಏನೂ ಇಲ್ಲ. ಕಮಗೆ ಚರ್ಚೆ ಮಾಡಂವ್ದಕ್ಕೆ ಇಷ್ಟವಿದ್ದರೆ ಯಾವ ನಿಯಮದ ಪ್ರಕಾರ ಬೇಕಾದರೂ ನೋಟೀಸ್ ತೆಗೆದು ಕೊಂಡು ಬನ್ನಿ, ಅದನ್ನು ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಮುಖ್ಯಮಂತ್ರಿಗಳವರೇ ಹೇಳಿದ ಮೇಲೆ ಈಗ ವಿಷಯ ವೇನೆಂಬುದು ಎಲ್ಲರಿಗೂ ಸ್ಪಷ್ಟವಾಗಿ ಅರ್ಥವಾಗಿದೆ. ಬಹಳ ಸಂತೋಷದ ವಿಷಯ, ಅವರು ಇಲ್ಲಿ ಇದ್ದಾದು ಬಹಳ ಒಳ್ಳೆಯದೇ ಆಯಿತು.

ಅಧ್ಯಕ್ಷರು.— ಸ್ವಲ್ಪ ತಡೆಯಿರಿ.....

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಅವರೇ ಸ್ವಾಗತ ಮಾಡುತ್ತೇನೆಂದು ಹೇಳಿದ್ದಾರೆ.....

ಅಧ್ಯಕ್ಷರು.— ನಾನೂ ಕೇಳಿದ್ದೇನೆ ದಯಮಾಡಿ ಸ್ವಲ್ಪ ಕುಳಿತುಕೊಳ್ಳಿ.

ಶ್ರೀ ಎನ್. ಚಿಕ್ಕೇಗೌಡ.— ಸಮಯ ಹಾಳು ಮಾಡುತ್ತಿದ್ದೀರೆಂದು ತಾವು ನಮಗೆ ಹೇಳಿದಿರಿ.....

ಅಧ್ಯಕ್ಷರು.— ಅದಕ್ಕೆ ಉತ್ತರ ಹೇಳಬೇಕೂ ಇಲ್ಲವೋ ? ದಯವಿಟ್ಟು ಎಲ್ಲರೂ ಕುಳಿತು ಕೊಳ್ಳಿ. ಮಾನ್ಯ ಶ್ರೀ ಚಿಕ್ಕೇಗೌಡರವರು ಹಿರಿಯ ಸದಸ್ಯರಿದ್ದಾರೆ, ಅವರು ತಮ್ಮ ಹಿರಿತನವನ್ನು ಪ್ರದರ್ಶನ ಮಾಡಬೇಕಾಗುತ್ತದೆ. ನಾನು ಸಮಯ ಹಾಳು ಮಾಡುವುದು ಬೇಡ, ದಯಮಾಡಿ ಶ್ರೀಮಾನ್ ಬಂಗಾರಪ್ಪನವರು ನೋಟೀಸ್ ಏನು ಕೊಟ್ಟಿದ್ದಾರೆನ್ನುವ ವಿಷಯವನ್ನು ಮೊದಲು ತಿಳಿದುಕೊಳ್ಳಿ, ಅದರಲ್ಲಿ ಏನಿದೆ ಎಂಬುದನ್ನು ತಿಳಿದುಕೊಳ್ಳದೇ ಚರ್ಚೆ ಮಾಡಿಸದನದ ಸಮಯ ಹಾಳು ಮಾಡಂವ್ದು ಬೇಡವೆಂದು ಹೇಳಿದ್ದೇನೆ. ನಾನು ಇಷ್ಟು ಹೇಳುವುದನ್ನೂ ಕೇಳುವುದಕ್ಕೆ ತಾಳ್ಮೆ ಇಲ್ಲದಿದ್ದರೆ ಹೇಗೆ ? ಹೀಗಾದರೆ ಸಭೆಯನ್ನು ನಡೆಸಂವ್ದಕ್ಕೆ ಹೇಗೆ ಸಾಧ್ಯವಾಗುತ್ತದೆ. ?

ಶ್ರೀ ಎಂ. ವೀರಪ್ಪ ಮೊಯ್ಲಿ.— ಸಮಯ ಹಾಳು ಮಾಡುವುದು ಎಂದರೆ ಅರ್ಥವೇನು ?

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ಏನು ನೋಟೀಸ್ ಕೊಟ್ಟಿದ್ದಾರೆಂಬುದನ್ನು ತಿಳಿದು ಕೊಳ್ಳದೇ ಚರ್ಚೆ ಮಾಡಿದರೆ ಸಮಯ ಹಾಳಾಗುತ್ತದೆ. ಆದುದರಿಂದ ನೋಟೀಸ್ ಏನಿದೆ ಎಂಬುದನ್ನು ಓದುತ್ತೇನೆ ಕೇಳಿ ಎಂದು ಹೇಳುತ್ತಿದ್ದೆ.....

ಶ್ರೀ ಎಂ. ವೀರಪ್ಪಮೊಯ್ಲಿ.—ಹಾಗಾದರೆ ಮಾನ್ಯ ಲಕ್ಷ್ಮೀಸಾಗರ್‌ರವರು ಪಾಯಿಂಟ್ ಆಫ್ ಆರ್ಡರ್ ಎತ್ತುವುದಕ್ಕಿಂತ ಮುಂಚಿತವಾಗಿ ಅದನ್ನು ತಾವು ಹೇಳಬೇಕಾಗಿತ್ತು, ಆ ರೀತಿ ಮಾಡದೇ ಅವರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟು, ಈಗ ನಮಗೆ ಸಮಯ ಹಾಳು ಮಾಡುವುದು ಬೇಡವೆಂದು ಹೇಳುತ್ತಿದ್ದೀರಿ. ತಾವು ನಮಗೆ ರಕ್ಷಣೆ ಕೊಡತಕ್ಕ ಸ್ಥಾನದಲ್ಲಿದ್ದೀರಿ.

ಅಧ್ಯಕ್ಷರು.—ಆ ಕಾರಣದಿಂದಲೇ ನೋಟೀಸ್ ಓದುತ್ತೇನೆಂದು ಹೇಳಿದ್ದು.

ಶ್ರೀ ಎಂ. ವೀರಪ್ಪಮೊಯ್ಲಿ.— ರಕ್ಷಣೆ ಕೊಡತಕ್ಕ ಸ್ಥಾನದಲ್ಲಿಯೇ ತಾವು ಕುಳಿತುಕೊಂಡು ಸಮಯ ಹಾಳು ಮಾಡುತ್ತಿದ್ದೀರಿ ಎಂದು ಸ್ಪೆಸಿಫಿಕ್ ಆಗಿ ವಿರೋಧ ಪಕ್ಷದ ನಾಯಕರಿಗೆ ತಾವು ಹೇಳುವುದಾದರೆ, ಅದರಿಂದ ಈ ಸದನದ ಕಾರ್ಯಕಲಾಪಗಳಿಗೆ ಘನತೆ ಗೌರವ ಬರುವುದಾದರೆ ಅದನ್ನು ಹೇಳಿ.....

ಅಧ್ಯಕ್ಷರು.— ನಾನು ಯಾವ ಕೆಂಟೆಕ್ಸ್‌ಟ್ ಮೇಲೆ ಹೇಳಿದ್ದೇನೆಂಬುದನ್ನು ತಾವು ಅರ್ಥ ಮಾಡಿ ಕೊಳ್ಳಿ, ಅದನ್ನು ಜನರಲೈಜ್ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎಂ. ವೀರಪ್ಪಮೊಯ್ಲಿ.—ತಾವು ಆ ರೀತಿಯ ರಿಮಾರ್ಕ್ಸ್‌ನ್ನು ಮಾಡಿದರೆ ಅದರಿಂದ ಈ ಸಭೆಯ ಘನತೆ ಗೌರವ ಉಳಿಯುತ್ತದೆಯೇ ! ಹಾಗಿದ್ದರೆ ತಾವು ಪಾಯಿಂಟ್ ಆಫ್ ಆರ್ಡರ್ ಎತ್ತಿ ಹೇಳುವುದಕ್ಕೆ ಅವರಿಗೂ ಅವಕಾಶವನ್ನು ಕೊಡಬಾರದಾಗಿತ್ತು. ಅವರಿಗೆ ಎತ್ತುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇದು ಏನು ಹೊಸ ಸಂಪ್ರದಾಯವಲ್ಲ. ಜೀರೋ ಅವರ್‌ನಲ್ಲಿ ಯಾವುದೇ ವಿಚಾರದ ಬಗ್ಗೆ ನೋಟೀಸ್ ಕೊಡಲಿ ಕೊಡದೇ ಇರಲಿ ಮೂಲಭೂತವಾದ ಪ್ರಶ್ನೆ ಬಂದಾಗ ವಿರೋಧ ಪಕ್ಷದ ನಾಯಕನಾಗಿ, ಈ ಪಕ್ಷದ ಸದಸ್ಯನಾಗಿ ನಾನು ಎದ್ದು ನಿಂತು ಆ ವಿಚಾರದ ಬಗ್ಗೆ ವಿಶ್ಲೇಷಣೆ ಮಾಡುವುದು ಇದೆ, ಹಾಗಿಲ್ಲದೇ ಹೋದರೆ ಜೀರೋ ಅವರ್‌ವ ಉಪಯೋಗ ಮಾಡುವುದಕ್ಕೆ ಬರುತ್ತದೆಯೇ ?

ಶ್ರೀ ಎಂ. ರಘುಪತಿ.—ಅದು ಈಗ ಇಲ್ಲವೇ ಇಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಹಾಗಾದರೆ ನಾವು ಏನು ಮಾಡಬೇಕು ? ಇಂಥಾ ವಿಚಾರ ಬಂದಾಗ ನಾವು ನಿಮ್ಮ ಕಚೇರಿಗೆ ನೋಟೀಸ್ ಕೊಟ್ಟಮೇಲೆ, ನೋಟೀಸ್ ಓದಿ, ಪಾಠ ಕಲಿತು, ನಿಮ್ಮ ಹತ್ತಿರ ಟ್ಯೂಷನ್ ಎಲ್ಲಾ ಕಲಿತುಕೊಂಡು ಬಂದು ಇಲ್ಲಿ ವಿಚಾರವನ್ನು ಎತ್ತಬೇಕೆಂದು ಹೇಳುವುದಾದರೆ ಈ ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಅಧ್ಯಕ್ಷರೇ ನಮಗೆ ರಕ್ಷಣೆಯನ್ನು ಕೊಡಬೇಕಾಗುತ್ತದೆ.

ಶ್ರೀ ಎಂ. ರಘುಪತಿ.—ಈಗ ವಿರೋಧ ಪಕ್ಷದ ನಾಯಕರು ಗೌರವದಿಂದ ಮಾತನಾಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು.—ಆರ್ಡರ್ ಪ್ಲೀಸ್, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ...

(ಗೊಂದಲ)

ಅಧ್ಯಕ್ಷರು.—ದಯವಿಟ್ಟು, ಕುಳಿತುಕೊಳ್ಳಿ, ದಯವಿಟ್ಟು ಕುಳಿತುಕೊಳ್ಳಿ, ಇಲ್ಲಿ ಕೆಲವು ತಪ್ಪು ಕಲ್ಪನೆಯಾಗಿದೆ, ದಯಮಾಡಿ ನಾನು ಹೇಳುವುದು ಕೇಳಿ, ತಾವು ಹೇಳಿದ ಮೇಲೆ ಈಗ ನಾನು ಹೇಳುವುದನ್ನು ತಾವು ಕೇಳಬೇಕೋ ಬೇಡವೋ ? ನಾನು ಯಾವ ಕಾಂಟೆಕ್ಸ್‌ಟ್‌ನಲ್ಲಿ ಹೇಳಿದ್ದೇನೆ ಎಂದರೆ ..

ಶ್ರೀ ಎಸ್. ಬಂಗಾರಪ್ಪ.—ತಾವು ಇಲ್ಲಿ ಮೊದಲು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದು ಸರಿಯೇ !

ಅಧ್ಯಕ್ಷರು.—ತಾವು ಒಂದು ವಿಷಯವನ್ನು ಸಿಸಿಳರ ಕೆಳಗೆ ಎತ್ತಿದ್ದೀರಿ, ಅದು ಬಹಳ ಸೂಕ್ಷ್ಮವಾದ ವಿಚಾರವಾದ್ದರಿಂದ ಮುಖ್ಯಮಂತ್ರಿಗಳು ಬರಲಿ, ಅದಕ್ಕೆ ಸಮಯ ಯಾವ ರೀತಿಯಾಗಿ ನಿಗದಿ ಮಾಡ

ಬೇಕೊ ಎನ್ನುವ ಬಗ್ಗೆ ಆಲೋಚನೆ ಮಾಡೋಣ, ಇವತ್ತಿನ ದಿವಸ ನೋಟೀಸ್ ನಮ್ಮ ಗಮನಕ್ಕೆ ತಂದಿದ್ದೀರಿ ಎಂದು ಹೇಳಿದ್ದೇನೆ. ಎರಡನೆಯದಾಗಿ, ಪಾಯಿಂಟ್ ಆಫ್ ಆರ್ಡರ್ ಎಂದು ಅವರು ವಿಷಯವನ್ನು ಎತ್ತಿದರು, ಅವರು ಏನು ಹೇಳುತ್ತಿದ್ದಾರೆ ಎನ್ನುವುದನ್ನು ಪೂರ್ತಿಯಾಗಿ ಕೇಳದಿದ್ದಲೆ ನಿರ್ಧಾರ ಮಾಡುವುದು ಹೇಗೆ ಎಂದು ಅವರಿಗೆ ಅವಕಾಶ ಮಾಡಿಕೊಟ್ಟೆ. ಆನಂತರ ಇಲ್ಲಿ ಪುನಃ ಚರ್ಚೆ ಮುಂದುವರಿಯುತ್ತಿದ್ದರಿಂದ ಸದನದ ಸಮಯವನ್ನು ಹಾಳು ಮಾಡುವ ಬದಲು ಮಾನ್ಯ ಬಂಗಾರಪ್ಪ ನವರ ನೋಟೀಸನ್ನು ಈ ಸದನದಲ್ಲಿ ಇಡೋಣ, ಇದು ಪಾಯಿಂಟ್ ಆಫ್ ಆರ್ಡರ್‌ಗೆ ಅನ್ವಯಿಸುತ್ತದೆಯೋ ಇಲ್ಲವೋ ಎನ್ನುವುದನ್ನು ತೀರ್ಮಾನ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಅವಕಾಶ ಮಾಡಿಕೊಟ್ಟಿದೆ. ಆದುದರಿಂದ ಯಾವ ಕಂಟಿಕ್ಸ್ಚುವಲ್ಲಿ ಸಮಯ ಹಾಳು ಮಾಡುವುದು ಬೇಡವೆಂದು ಹೇಳಿದೆ ಎಂಬುದನ್ನು ಅರ್ಥ ಮಾಡಿಕೊಳ್ಳದೇ ಇದನ್ನು ಜನರಲೈಜ್ ಮಾಡತಕ್ಕದ್ದು ಸರಿಯಲ್ಲ, ಅದು ಈ ಸದನಕ್ಕೆ ಗೌರವ ತರತಕ್ಕದ್ದು ಅಲ್ಲ. I can never do that. I assure you that I will never do it.

ಶ್ರೀ ಎಸ್. ಚಿಕ್ಕೇಗೌಡ.—ತಾವು ಯಾವ ಕಾಂಟೆಕ್ಸ್ಟ್‌ನಲ್ಲಿ ಹೇಳಿದ್ದೀರಿ ಎನ್ನುವ ಬಗ್ಗೆ ರೆಕಾರ್ಡ್ ತೆಗೆಸಿನೋಡಿ...ಮತ್ತೆ ಮಾನ್ಯ ಮುಖ್ಯಮಂತ್ರಿಗಳವರೇ ಇದರ ಬಗ್ಗೆ ಚರ್ಚೆಗೆ ಯಾವುದೇ ರೂಪದಲ್ಲಿ ನೋಟೀಸ್ ತೆಗೆದುಕೊಂಡು ಬನ್ನಿ, ಅದನ್ನು ಸ್ವಾಗತಿಸುತ್ತೇನೆ ಎಂದು ಹೇಳಿದ್ದಾರೆ. ಅವರು ಹೇಳಿದ ಮಾತನ್ನು ಅವರು ದೃಢೀಕರಿಸಿಕೊಳ್ಳುವುದಕ್ಕೆ ಸಿದ್ಧರಾಗಿದ್ದೇನೆಂದು ಹೇಳಿರುವಾಗ ತಾವು ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಅದಕ್ಕೆ ಒಂದು ಸಮಯವನ್ನು ವಿಗದಿ ಮಾಡಬೇಕೋ ಬೇಡವೋ ?

ಈಗ ವಿಷಯವನ್ನು ನಮ್ಮ ಗಮನಕ್ಕೆ ತಂದಿದ್ದೀರಿ. ಅದನು ನಾನು ವಿಚಾರ ಮಾಡಿ ಅದಕ್ಕೆ ತಕ್ಕ ವ್ಯವಸ್ಥೆ ಮಾಡುತ್ತೇನೆ. ಅದರ ಬಗ್ಗೆ ಮತ್ತೇಕೆ ಚರ್ಚೆ ಮಾಡುತ್ತಿದ್ದೀರಿ?

ಶ್ರೀ ಎನ್. ಚಿಕ್ಕೇಗೌಡ.—ಈಗ ತಾನೇ ತಾವು ಹೇಳಿದಿರಿ. ಇದು ಬಹಳ ಸೂಕ್ಷ್ಮವಾದ ವಿಷಯ ಎಂದು. ಆದರೆ ಮುಖ್ಯಮಂತ್ರಿಗಳು, ಇದು ಸೂಕ್ಷ್ಮವಾದ ವಿಷಯ ಅಲ್ಲವೆಂದು ಹೇಳಿದ್ದಾರೆ. ಮುಖ್ಯಮಂತ್ರಿಗಳು ಸದನಕ್ಕೆ ಬರಲಿ, ಆಮೇಲೆ ಚರ್ಚೆಗೆ ತೆಗೆದುಕೊಳ್ಳೋಣ ಎಂದು ಹೇಳಿದ್ದೀರಿ. ಈಗ ಅವರು ಬಂದಿದ್ದಾರೆ. ಅವರು ಮಾಡಿದ ಭಾಷಣದ ಪ್ರಕಾರ ಇದು ಸೂಕ್ಷ್ಮ ವಿಷಯ ಆಗುವುದಿಲ್ಲ.

ಶ್ರೀ ಎಂ. ಎಸ್ ಕೃಷ್ಣನ್— ಶ್ರೀ ಮೊಯಿಲಿಯವರು ಹೇಳಿದ್ದನ್ನು ನಾನು ಕೇಳಿದೆ ಮತ್ತು ರಘುಪತಿಯವರು ಹೇಳಿದ್ದನ್ನು ನಾನೂ ಕೇಳಿದೆ. ಇದು ಗೊಂದಲಕ್ಕೆ ಹೆಚ್ಚು ಅವಕಾಶವಾಗುತ್ತಿದೆಯೇ ಹೊರತು ನಮಗೆ ಸ್ಪಷ್ಟತೆ ಕಾಣಲ್ಲಿಲ್ಲ ಶ್ರೀ ಬಂಗಾರಪ್ಪನವರ ಏನು ನೋಟೀಸ್ ಕಳುಹಿಸಿದ್ದಾರೆ, ಅದನ್ನು ತಿಳಿದುಕೊಂಡರೆ ಆ ಮೇಲೆ ಏನು ತೀರ್ಮಾನ ಮಾಡಬಹುದೆಂದು ತಾವು ಅಭಿಪ್ರಾಯ ಪಟ್ಟಿದ್ದೀರಿ. ಆದರೆ ಇದುವರಿಗೆ ನಮಗೆ ಅದರಲ್ಲಿ ಏನಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವಾಗಿಲ್ಲ.

ಅಧ್ಯಕ್ಷರು— ತಿಳಿದುಕೊಳ್ಳುವುದಕ್ಕೆ ತಾವು ಸಿದ್ಧವಿಲ್ಲದಿದರೆ ಏನು ಮಾಡೋಣ?

ಶ್ರೀ ಎಂ. ಎಸ್. ಕೃಷ್ಣನ್.—ತಾವು ಮೊದಲೇ ಓದಿ ತಿಳುವಳಿಕೆ ಕೊಟ್ಟಿದ್ದರೆ ಒಳೆಯದಿತ್ತು. ಬಂಗಾರಪ್ಪನವರು ಹೇಳಿದ ಹಾಗೆ ಅವರ ವ್ಯಾಖ್ಯಾನವನ್ನು ನಾನು ತಿಳಿದುಕೊಂಡ ಹಾಗೆ ರಾಜ್ಯಪಾಲರ ಬಗ್ಗೆ ಯಾರೂ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ ಮತ್ತು ಅದಕ್ಕೆ ಅವಕಾಶವೂ ಇಲ್ಲ. ಮುಖ್ಯಮಂತ್ರಿಗಳು ಯಾವುದೇ ಸಮ್ಮೇಳನದಲ್ಲಿ ಹೇಳಿರುವುದನ್ನು ಚರ್ಚೆ ಮಾಡುವ ವಿಷಯ ನೋಟೀಸಿನಲ್ಲಿ ಅಡಕವಾಗಿದ್ದರೆ ಚರ್ಚೆಗೆ ಅವಕಾಶ ಇದೆ. ಆದರೆ ರಾಜ್ಯಪಾಲರನ್ನು ಪ್ರಶ್ನೆ ಮಾಡುವ ರೀತಿಯಲ್ಲಿದ್ದರೆ ಅದಕ್ಕೆ ನನಗೆ ತಿಳಿದಂತೆ ಅವಕಾಶ ಇಲ್ಲ.

ಅಧ್ಯಕ್ಷರು.— ಅದನ್ನೇ ನಾನು ಪುನಃ ಪುನಃ ಹೇಳಿದ್ದು. ಈ ನೋಟೀಸ್‌ನಲ್ಲಿರತಕ್ಕದ್ದನ್ನು ಓದಿದರೆ ನಿಮಗೆ ಸಹಾಯವಾಗುತ್ತದೆ. ಇದಕ್ಕಾಗಿ ಈ ಸದನದ ಸಮಯವನ್ನು ಹಾಳು ಮಾಡುವುದು ಬೇಡವೆಂದು;

ಶ್ರೀ ಎಂ. ಎಸ್. ಕೃಷ್ಣನ್— ಮೊದಲು ಅದನ್ನು ಓದಿಬಿಡಿ. ಆಮೇಲೆ ಬೇಕಾದರೆ ಚರ್ಚೆಗೆ ಕಾಲವನ್ನು ಗೊತ್ತು ಮಾಡಿ. ಮುಖ್ಯಮಂತ್ರಿಗಳು ಹೇಳಿದ್ದರು ನಾನು ಆ ರೀತಿ ಹೇಳಿದ್ದೇನೆ ಮತ್ತು ಮುಂದೆಯೂ ಸಹ ಹೇಳುತ್ತೇನೆ ಎಂದು, ಅಲ್ಲದೆ ಚರ್ಚೆಗೂ ಸಿದ್ಧನಾಗಿದ್ದೇನೆ ಎನ್ನುತ್ತಾರೆ;

ಒಳ್ಳೆಯದು. ನನಗೆ ಅವರ ನಿಲುವಿನ ಬಗ್ಗೆ ಬಿನ್ನಭಿಪ್ರಾಯವಿಲ್ಲ. ಚರ್ಚೆ ಮಾಡತಕ್ಕದ್ದು ಸಂತೋಷ ಚರ್ಚೆಮಾಡೊಣ ಇದಕ್ಕೆ ಸರಿಯಾದ ನೋಟೀಸ್. ಕಳುಹಿಸಬೇಕಾದರೆ. ಈ ನೋಟೀಸ್ ಅಲ್ಲದೆ ಬೇರೆ ನೋಟೀಸ್ ಕಳುಹಿಸುವುದಕ್ಕೆ ವ್ಯವಸ್ಥೆ ಮಾಡಿಕೊಡಿ. ಅಥವಾ ಈ ನೊಟೀಸ್ ಆಗುವುದೇ ಇದ್ದರೆ ಇದನ್ನು ಪರಿವರ್ತನೆ ಮಾಡಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಇದರ ಬಗ್ಗೆ ಇನ್ನು ಹೆಚ್ಚು ಚರ್ಚೆ ಬೇಕಾಗಿಲ್ಲ.

ಅಧ್ಯಕ್ಷರು— ನೀವು ಮತ್ತು ಮುಖ್ಯಮಂತ್ರಿಗಳು ಚರ್ಚೆಗೆ ಒಪ್ಪುತ್ತಿರಿ. ನನ್ನ ಕೆಲಸ ಆದಕ್ಕೆ ಸಮಯವನ್ನು ನಿಗದಿ ಮಾಡುವುದು. ಮುಖ್ಯಮಂತ್ರಿಗಳು ಬರಲಿ. ಅವರ ಗಮನಕ್ಕೆ ತರುತ್ತೇನೆ, ಆಮೇಲೆಸಮಯ ನಿಗದಿ ಮಾಡೋಣ ಎಂದು ಹೇಳಿದೆ ಏತನ್ಮಧ್ಯೆ ಅವರು ಕ್ರೀಯಾಲೋಪವನ್ನು ಎತ್ತಿದ ಕಾರಣ, ತಾವು ನೋಟೀಸ್ ನೋಡಿದರೆ ಅದರ ಬಗ್ಗೆ ವ್ಯಾಖ್ಯಾನದ ಅವಶ್ಯಕತೆ ಬರುವುದಿಲ್ಲ; ಸುಮ್ಮನೆ ಸದನದ ಸಮಯವನ್ನು ಹಾಳು ಮಾಡುವುದು ಬೇಡ ಎಂದು ಹೇಳಿದೆ.

ಶ್ರೀ ಎಂ. ಎಸ್ ಕೃಷ್ಣನ್— ಮೊದಲು ನೋಟೀಸನ್ನು ಓದಿಬಿಡಿ.

MR. SPEAKER.—Your notice reads thus.

"Under Rule 334, we would like to raise the subject, 'the Chief Minister has said that the Governors of the States are Just Like glorifed servants' which has been sharply reacted by the Governor of our State. Please permit us, for discussion."

Therefore, I leave it to you to draw the inferenae, I only wanted to put the records straight to the house. I have placed, now, the Hon. Chfie Minister also accepts that he has made a statement and he is also prepared to dsscuss the matter. the Hon Member Sri S. Bangarappa and some of the hon. Members have sent the notice. I only request that to give me some time to think and fix the time for discussion. I think, we will close the subject now.

ಶ್ರೀ ಎಂ. ಎಸ್. ಕೃಷ್ಣನ್.—ಆಗಬಹುದು. ಒಂದು ವಿಷಯವಿಪನ್ನ ನಾನು ತಮ್ಮಲ್ಲಿ ಅರಿಕೆ ಮಾಡಿಗೊಳ್ಳುತ್ತೇನೆ. ತಾವು ಓದಿದ ಪತ್ರದಲ್ಲಿ ವಿಷಯ ಸ್ಪಷ್ಟವಾಗಿದೆ. ಆದ್ದರಿಂದ, ನಾನು ಕೇಳಬಯಸುವುದೇನೆಂದರೆ ಇದರ ಜೊತೆಗೆ ಗವರ್ನರ್ ಸಿಸ್ಟಂ ಬಗ್ಗೆ ಮತ್ತು ಸೆಂಟರ್ ಮತ್ತು ಸ್ಟೇಟ್ ವಿಷಯವನ್ನು ಸಹ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇವೆ.

ಅಧ್ಯಕ್ಷರು.—ಅದಕ್ಕೆ ಪ್ರತ್ಯೇಕ ನೋಟೀಸ್ ಕಳುಹಿಸಿ. ಈಗ ಆ ವಿಷಯ ಇಲ್ಲಿಗೆ ಮುಗಿಯಿತು. ಈಗ ಮುಂದಿನ ವಿಷಯವಾದ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ.

ಶ್ರೀ ಎಂ ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ವಿದ್ಯಾ ಮಂತ್ರಿಗಳು ಒಂದು ಆಜ್ಞೆಯನ್ನು ಹೊರಡಿಸಿ ಎಳೆಯಾರ ಎಂಬ ಗ್ರಾಮದಲ್ಲಿ ಪ್ರೌಢಶಾಲೆಯನ್ನು ತೆರೆದ ಎಂಟೆ ದಿನಗಳಲ್ಲಿ ಅದನ್ನು ಸ್ಥಳಾಂತರಿಸುವುದರಿಂದ ವಿದ್ಯಾರ್ಥಿಗಳಿಗೆ ಆಗಿರುವ ತೊಂದರೆ ಬಗ್ಗೆ ಒಂದು ನೋಟೀಸನ್ನು ಕಳುಹಿಸಿದ್ದೇನೆ.

ಅಧ್ಯಕ್ಷರು.—ಈಗ ತಾನೇ ಕೊಟ್ಟಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದು ಬಹಳ ಮಹತ್ವದ ವಿಷಯ. ಇವತ್ತಿನ ದಿವಸ ಸುಮಾರು ೪೦ ಮಂದಿ ಮಕ್ಕಳು ಬೀದಿ ಪಾಲಾಗಿದ್ದಾರೆ. ಈ ವಿಷಯದಲ್ಲಿ ಸ್ಥಳೀಯ ಮಂತ್ರಿಗಳು ಮಧ್ಯೆ ಪ್ರವೇಶಿಸಿ ಎಳೆಯಾರ ಗ್ರಾಮದಲ್ಲಿದ್ದ ಶಾಲೆಯನ್ನು ಬೇರೊಂದು ಗ್ರಾಮಕ್ಕೆ ಮಂಜೂರಾತ್ಮಾಡಿಸಿರುವುದರಿಂದ ಅಲ್ಲಿದಂತಹ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗಿದೆ. ಒಂದು ಕಡೆ ಮಂಜೂರಾಗಿ ನಡೆಯುತ್ತಿದ್ದ ಶಾಲೆಯನ್ನು ಬೇರೊಂದು ಕಡೆಗೆ ವರ್ಗಾಯಿಸುವುದು ಎಂದರೆ ಇದು ಯಾವ ನ್ಯಾಯ?

ಇದರ ಬಗ್ಗೆ ಶಿಕ್ಷಣ ಸಚಿವರು ಒಂದು ಹೇಳಿಕೆ ಕೊಡಬೇಕು. ಶಾಲೆಯನ್ನು ಮುಂಜೂರ್ಮಾಡಿದ ಕೆಲವೇ ದಿನಗಳಲ್ಲಿ ಆ ಆಜ್ಞೆಯನ್ನು ಬದಲಾವಣೆ ಮಾಡತಕ್ಕ ಅವಶ್ಯಕತೆಯಾದರೂ ಏನಿತ್ತು ?

ಶ್ರೀ ಬಿ. ರಾಚಯ್ಯ.—ನಾನು ಮೊದಲು ಸ್ಥಳ ಪರೀಕ್ಷೆ ಮಾಡಿರಲಿಲ್ಲ. ಎಳೆಯಾರ ಎಂಬ ಗ್ರಾಮಕ್ಕೆ ಶಾಲೆ ಬೇಕೆಂದು ಶಿಫಾರಸ್ಸು ಬಂದಿತ್ತು ; ಆ ಪ್ರಕಾರ ಕೊಟ್ಟೆ ಆ ಮೇಲೆ ಆ ಬಗ್ಗೆ ವಿಚಾರ ಮಾಡಿದಾಗ ಕಂದಕೂರು ಎಂಬುದು ಸೆಂಟರ್ ಪ್ಲೇಸ್, ಆಗುತ್ತದೆಂದು ಹೇಳಿದರು.

ಶ್ರೀ ಎಂ. ವೀರಪ್ಪ ಮೊಯಿಲಿ.—ಯಾರ ಹತ್ತಿರ ವಿಚಾರ ಮಾಡಿದಿರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಜನತಾ ಪಕ್ಷದ ಅಧ್ಯಕ್ಷರ ಊರು ಎಂದು ಅಲ್ಲಿಗೆ ಶಾಲೆಯನ್ನು ಬದಲಾವಣೆ ಮಾಡಿದಿರಾ ? ಜನ ಸಾಮಾನ್ಯರಿಗೆ ಸಹಾಯ ಮಾಡುತ್ತೀರಾ ಅಥವಾ ನಿಮ್ಮವರೇ ಆದ ಜನರಿಗೆ ಸಹಾಯ ಮಾಡುತ್ತೀರಾ ? ಜಂಟಿ ನಿರ್ದೇಶಕರ ವರದಿ ಇದ್ದೆ ಏಕೆ ಅಲ್ಲಿಗೆ ಶಾಲೆ ಕೊಟ್ಟೀರಿ ?

ಅಧ್ಯಕ್ಷರು.—ಮಂತ್ರಿಗಳಿಂದ ಉತ್ತರ ಕೇಳುವುದನ್ನು ಬಿಟ್ಟು ನೀವೇ ಎದ್ದು ನಿಂತರೆ ಹೇಗೆ !

ಶ್ರೀ ಬಿ. ರಾಚಯ್ಯ.—ಶ್ರೀ ಮೊಯಿಲಿಯವರಿಗೆ ಮೂಗಿನ ಮೇಲೆ ಯಾವಾಗಲೂ ಕೋಪ ಬರುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವು ಮಾಡತಕ್ಕ ಕೆಲಸಗಳನ್ನು ನೋಡಿದರೆ ಹಾಗಾಗುತ್ತದೆ.

ಶ್ರೀ ಬಿ. ರಾಚಯ್ಯ.—ನಾವು ಮಾಡತಕ್ಕ ಕೆಲಸವನ್ನು ಸಲೀಸಾಗಿ ಮಾಡುತ್ತಿದ್ದೇವೆ. ಅವರು ಮಾಡಿರತಕ್ಕ ಅವಾಂತರದ ರೀತಿಯಲ್ಲಿ ನಾವು ಮಾಡಿಲ್ಲ. ಎಳೆಯಾರಕ್ಕೆ ಶಾಲೆಯನ್ನು ಕೊಟ್ಟಿದ್ದು ನಿಜ ; ಅಲ್ಲಿ ವಿದ್ಯಾರ್ಥಿಗಳು ಸೇರಿದ್ದರೆ ಅವರನ್ನು ಖಾಯಂ ಮಾಡುತ್ತೇವೆ. ಅಲ್ಲಿ ವಿದ್ಯಾರ್ಥಿಗಳು ಸೇರಿರದಿದ್ದರೆ ಅವರನ್ನು ತೆಗೆದು ಹಾಕುತ್ತೇವೆ. ನಾವು ಆ ರೀತಿ ಅನ್ಯಾಯ ಮಾಡುವುದಕ್ಕೆ ಹೋಗುವುದಿಲ್ಲ ; ಅನ್ಯಾಯ ಮಾಡುವುದು ನನ್ನ ಮನಸ್ಸಿನಲ್ಲಿ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವು ಮನಸ್ಸಿನಲ್ಲಿ ಮಾಡಿದ್ದೀರಿ ಅಷ್ಟೆ.

ಶ್ರೀ ಎಸ್. ಬಂಗಾರಪ್ಪ.—ಅನ್ಯಾಯ ಮಾಡುವುದಕ್ಕೆ ಶಕ್ತಿ ಬೇಕಾಗುತ್ತದೆ : ಅದು ಅಷ್ಟು ಸುಲಭವಲ್ಲ. ನಿಮಗೆ ಶಕ್ತಿ ಇಲ್ಲದೆ ಹೇಗೆ ಮಾಡುತ್ತೀರಿ ?

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಆರ್ಡರಿಗೆ ಬನ್ನಿ. ಮುಂದಿನ ವಿಷಯಕ್ಕೆ ಹೋಗೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದು ಬಹಳ ಮಹತ್ವದ ವಿಷಯ. ಸ್ಥಳೀಯ ಅಧಿಕಾರಿಗಳಾದ ಎ.ಇ.ಓ ಡಿಡಿಪಿಐ; ಜಂಟಿ ನಿರ್ದೇಶಕರು ಮತ್ತು ಅಕ್ಕಪಕ್ಕದಲ್ಲಿರತಕ್ಕ ಹಳ್ಳಿಯ ಜನರ ಒಪ್ಪಿಗೆಯನ್ನು.....

ಅಧ್ಯಕ್ಷರು.—ಈಗಾಗಲೇ ಅದಕ್ಕೆ ಮಂತ್ರಿಗಳು ಉತ್ತರ ಹೇಳಿದ್ದಾರೆ. ಈಗ ಮುಂದಿನ ವಿಷಯಕ್ಕೆ ಹೋಗೋಣ.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಏನು ಉತ್ತರ ಹೇಳಿದ್ದಾರೆ? I want to know as to why they have done like this. There is no limit for this. We cannot allow...

(*Interruptions*)

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಪಿ.ಎಲ್.ಡಿ. ಬ್ಯಾಂಕ್ ನೌಕರರು ಸತ್ಯಾಗ್ರಹ ಮಾಡುತ್ತಿರುವ ಬಗ್ಗೆ ನಾನು ನೋಟೀಸ್ ಕೊಟ್ಟಿದ್ದೇನೆ. ರೈತರಿಗೆ ಸಾಲ ಸಿಗುತ್ತಿಲ್ಲ, ಜನ ಸಾಯುತ್ತಿದ್ದಾರೆ, ದಯವಿಟ್ಟು ನಾನು ಆ ವಿಷಯ ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು,

MR. SPEAKER.—Nothing will go on record. ನೀವು ನೋಟೀಸ್ ಕೊಟ್ಟಿದ್ದರೂ ಕೂಡ ಅದು ಬ್ಯಾಲಟ್ ಆಗಿ ಬರಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ರೈತರಿಗೆ ಸಾಲ ಸಿಗುತ್ತಿಲ್ಲ. ಜನ ಸಾಯುತ್ತಿದ್ದಾರೆ. ಇದು ಪ್ರಾಮುಖ್ಯವಾದ ಸಮಸ್ಯೆಯಾಗಿರುವುದರಿಂದ ದಯವಿಟ್ಟು ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡಬೇಕು.

ಶ್ರೀ ಎಂ. ಸೂರ್ಯನಾರಾಯಣರಾವ್.—ಅಲ್ಲಿ ಉಪವಾಸ ಮಾಡುತ್ತಿದ್ದಾರೆ. ನಿನ್ನೆಯೂ ತಾವು ಅವಕಾಶ ಕೊಡಲಿಲ್ಲ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಗುಲ್ಬರ್ಗದ ಎಂ.ಎಸ್.ಕೆ. ಮಿಲ್ ಕೆಲಸಗಾರರು ಆರು ದಿವಸಗಳಿಂದ ಉಪವಾಸ ಮುಷ್ಕರ ಮಾಡುತ್ತಿದ್ದಾರೆ. ಆ ಬಗ್ಗೆ ನೋಟೀಸ್ ಕೊಟ್ಟಿದ್ದೇನೆ. ಅವಕ್ಕೆ ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ನೋಡೋಣ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಹೊರಗಡೆ ಹೋರಾಟ ನಡೆಯುತ್ತಿದೆ. ಉಪವಾಸ ಮುಷ್ಕರ ಮಾಡುತ್ತಿದ್ದಾರೆ.

ಅಧ್ಯಕ್ಷರು.—ನೋಟೀಸ್ ಬೇಡವೆ?

ಶ್ರೀ ಎಸ್. ಸೂರ್ಯನಾರಾಯಣರಾವ್.—ಕೊಟ್ಟಿದ್ದೇವೆ.

ಅಧ್ಯಕ್ಷರು.—ಕೊಟ್ಟಿದ್ದರೆ ಬಾಲ್ಕಟ್ ಆಗಬೇಕು. ನೋಡುತ್ತೇನೆ ನಾನು.

ಶ್ರೀ ಬಿ. ಎಸ್. ಯಡಿಯೂರಪ್ಪ.—ದಯವಿಟ್ಟು ನನಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ನಿಮ್ಮ ನೋಟೀಸ್ ಬಂದಿದೆ. ನೋಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ರೂಲ್ ೩೫೪ರ ಕೆಳಗೆ ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು.—ನೀವು ನಿಮ್ಮ ವಿಷಯದ ಬಗ್ಗೆ ಗಮನ ಸೆಳೆಯುತ್ತೀರೋ ಇಲ್ಲವೊ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೩ ಸಾವಿರ ಜನ ಉಪವಾಸ ಮಾಡುತ್ತಿದ್ದಾರೆ.

ಅಧ್ಯಕ್ಷರು.—ನೀವು ನೋಟೀಸ್ ಕೊಟ್ಟಿದ್ದನ್ನೆಲ್ಲಾ ಇಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವತ್ತೇ ಉತ್ತರ ಹೇಳಬೇಕೆಂದು ಹೇಳುತ್ತಿಲ್ಲ. ಮಾನ್ಯ ಮಂತ್ರಿಗಳು ಹೇಳಿಕೆ ಕೊಡುವುದಾದರೆ ನನ್ನ ಅಭ್ಯಂತರವಿಲ್ಲ. ಬೇಕಾದರ ನಾಳೆ ನಾಡಿದ್ದರಲ್ಲಿ ಹೇಳಲಿ.

ಅಧ್ಯಕ್ಷರು.—ಮಂತ್ರಿಗಳಿಗೆ ನಾನು ಒತ್ತಾಯ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಪಿ.ಎಲ್.ಡಿ. ಬ್ಯಾಂಕ್ ಬಗ್ಗೆ ಪ್ರಸ್ತಾಪ ಮಾಡಲು ಯಾವಾಗ ಅವಕಾಶ ಕೊಡುತ್ತೀರಿ?

ಅಧ್ಯಕ್ಷರು.—ನೋಟೀಸ್ ಬಂದಿದೆ. ನಾನು ನೋಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿನ್ನೆಯೇ ನಾನು ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು —ಇವತ್ತೂ ಕೂಡ ೩೦ ಗಮನ ಸೆಳೆಯುವ ಸೂಚನೆಗಳು ಬಂದಿವೆ. ಯಾವುದನ್ನು ಯಾವಾಗ ತೆಗೆದುಕೊಳ್ಳಬೇಕು ಎಂಬ ಅಧಿಕಾರ ನನಗಿಲ್ಲ. ತವಂಗೆ ಗೊತ್ತಿರುವ ಹಾಗೆ ಬ್ಯಾಲೆಟ್ ಮಾಡುತ್ತೇವೆ. ಯಾವುದು ಆದರಲ್ಲಿ ಬರುತ್ತದೋ ಆದನ್ನು ಮೊದಲು ತೆಗೆದುಕೊಳ್ಳುತ್ತೇವೆ. ಈಗ ಶೂನ್ಯ ವೇಳೆಗೆ ಅವಕಾಶವಿಲ್ಲ. ಆದರೂ ವಿಶೇಷವಾದ ಸಂದರ್ಭಗಳಲ್ಲಿ ವಿಚಾರ ಮಾಡುವುದಕ್ಕೆ ಅವಕಾಶವಿರಲಿ ಎಂದು ಲೀನಿಯಂಟಾಗಿ ಅವಕಾಶ ಮಾಡಿಕೊಟ್ಟಿದ್ದೇನೆ. ಅದನ್ನು ನಾವು ನೀವು ದುರುಪಯೋಗ ಮಾಡಿಕೊಳ್ಳುವುದು ಬೇಡ. ಈಗ ಸಭೆಯ ಮುಂದೆ ಮುಖ್ಯವಾದ ಗಮನ ಸೆಳೆಯುವ ಸೂಚನೆ ಇದೆ. ಅದರ ಬಗ್ಗೆ ಗಮನ ಸೆಳೆಯಬೇಕೆಂದು ಮಾನ್ಯ ಸದಸ್ಯರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರನ್ನು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಾನು ಕೆಲವು ವಿಷಯ ಪ್ರಸ್ತಾಪ ಮಾಡಿದಾಗ ಸಭೆಯಲ್ಲಿ ಮುಂಖ್ಯ ಮಂತ್ರಿಗಳಿಲ್ಲ, ಅವರು ಬಂದಮೇಲೆ ಪ್ರಸ್ತಾಪ ಮಾಡಿ ಎಂಬ ಅಭಿಪ್ರಾಯವನ್ನು ತಾವು ಕೊಟ್ಟಿರಿ.

ಅಧ್ಯಕ್ಷರು.—ಅವರು ಒಪ್ಪಿಕೊಂಡಿದ್ದಾರಲ್ಲ.

ಶ್ರೀ ಎಸ್. ಬಂಗಾರಪ್ಪ.—ಅದೊಂದೇ ವಿಚಾರವಲ್ಲ, ಮಹಾರಾಷ್ಟ್ರ ಮುಂಖ್ಯಮಂತ್ರಿಗಳು ಮತ್ತು ನಮ್ಮ ಮುಂಖ್ಯಮಂತ್ರಿಗಳು ನಡೆಸಿರತಕ್ಕ ಮಾತುಕತೆಗಳ ಬಗ್ಗೆ...

ಅಧ್ಯಕ್ಷರು.—ಮತ್ತೆ ಹಿಂದಕ್ಕೆ ಏತಕ್ಕೆ ಹೋಗುತ್ತೀರಿ?

ಶ್ರೀ ಎಸ್. ಬಂಗಾರಪ್ಪ.—ಹಿಂದಕ್ಕೆ ಹೋಗುತ್ತಿಲ್ಲ. ತಾವು ಇಂಥ ವಿಷಯಗಳು ಬಂದಾಗ ಅದರ ಬಗ್ಗೆ ಹೇಳಿಕೆ ಕೊಡುವಂತೆ ಸರ್ಕಾರಕ್ಕೆ ಸೂಚನೆ ಕೊಡಬೇಕು. ಮಂತ್ರಿಮಂಡಲದ ಸದಸ್ಯರಾದರೂ ಈ ಬಗ್ಗೆ ಹೇಳಬೇಕು. ತಾವೇ ಈ ವಿಷಯದಲ್ಲಿ ನಮಗೆ ರಕ್ಷಣೆ ಕೊಡದಿದ್ದರೆ ಹೇಗೆ?

ಅಧ್ಯಕ್ಷರು.—ತಾವು ಹೇಳತಕ್ಕ ವಿಚಾರಗಳ ಪ್ರಾಮುಖ್ಯತೆಯನ್ನು ಸಲ್ಲ್ವಲ್ವವೂ ಕಡಿಮೆ ಮಾಡುವುದಕ್ಕೆ ನನಗೆ ಇಷ್ಟವಿಲ್ಲ. ದಯಮಾಡಿ ಅದನ್ನು ತಿಳಿದುಕೊಂಡರೆ ನಿವ್ಮಿ ಸಮಸ್ಯ ಪರಿಹಾರ ವಾಗುತ್ತದೆ. ನಾನು ಈ ವಿಷಯದಲ್ಲಿ ಯಾವ ನಿರ್ದೇಶನವನ್ನೂ ತೀರ್ಮಾನವನ್ನೂ ಕೊಟ್ಟಿಲ್ಲ. ವಿಷಯದ ಗಂಭೀರತೆಯನ್ನು ಅರಿತುಕೊಂಡು ಮುಖ್ಯಮಂತ್ರಿಗಳ ಜೊತೆ ಸಮಾಲೋಚನೆ ಮಾಡಿ ನಾವು ನೀವು ಕುಳಿತುಕೊಂಡು ಸಮಯ ನಿಗದಿ ಮಾಡೋಣ ಎಂದು ಹೇಳಿದ್ದೇನೆ. ಅನೇಕ ಪ್ರಮುಖವಾದ ವಿಚಾರಗಳನ್ನು ಒಟ್ಟಿಗೆ ತೆಗೆದುಕೊಳ್ಳಬೇಕೆಂದರೆ ಸದನ ಹೇಗೆ ನಡೆಯುತ್ತದೆ? ಈಗ ಸಭೆಯು ಮುಂದೆ ಗಮನ ಸೆಳೆಯುವ ಸೂಚನೆ ಇದೆ. ಇದು ಮುಗಿಯಲಿ. ತಾವು ನೋಟೀಸ್ ಕೊಟ್ಟಿದ್ದೀರಿ. ಈ ವಿಷಯವನ್ನು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇಡುತ್ತೇನೆ. ಆಗ ಅದರಲ್ಲಿ ತಾವೆಲ್ಲಾ ಹೇಗೆ ಸಮಯವನ್ನು ನಿಗದಿ ಮಾಡುತ್ತೀರೋ ಆ ರೀತಿ ಸದನದಲ್ಲಿ ಚರ್ಚೆ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಬಿಸಿನೆಸ್ ಅಡ್ವೈಸರಿ ಕಮಿಟಿ ಸೇರಿದಾಗ ಯಾವ ವಿಚಾರವನ್ನು ಸದನದಲ್ಲಿ ಚರ್ಚೆ ಮಾಡಬೇಕು, ಯಾವುದನ್ನು ತೆಗೆದುಕೊಳ್ಳಬಾರದು ತೆಗೆದುಕೊಳ್ಳುವ ಹಾಗಿದ್ದರೆ ಅದಕ್ಕೆ ಎಷ್ಟು ಕಾಲ ನಿಗದಿಪಡಿಸಬೇಕು ಎಂಬುದನ್ನು ಅಲ್ಲಿ ತೀರ್ಮಾನ ಮಾಡಂತ್ತೇವೆ. ಬಿಸಿನೆಸ್ ಅಡ್ವೈಸರಿ ಕಮಿಟಿ ಸಭೆ ಕರೆಯುವುದು ತಮಗೆ ಸೇರಿದ್ದು. ಕೆಲವು ವಿಚಾರಗಳನ್ನು ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಆಗುವವರೆಗೆ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಅಲ್ಲಿಯವರೆಗೂ ತಡೆದುಕೊಳ್ಳುವುದಕ್ಕಾಗುವುದಿಲ್ಲ, ಅಲ್ಲಿಯವರೆಗೂ ತಡೆದುಕೊಳ್ಳುವುದಕ್ಕಾಗುವುದಿಲ್ಲ. ಗಡಿ ವಿಚಾರದಲ್ಲಿ ಸರ್ಕಾರದ ಜವಾಬ್ದಾರಿ ಇದೆ. ಒಂದು ಸಾರಿ ಆ ಬಗ್ಗೆ ಚರ್ಚೆ ಮಾಡಿದಮೇಲೆ ಅದನ್ನು ಸದನದಲ್ಲಿ ಪ್ರಸ್ತಾಪ ಮಾಡಲೇಬೇಕು.

ಅಧ್ಯಕ್ಷರು.—ಆ ವಿಷಯ ನನ್ನ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಒಬ್ಬ ಮುಖಿಂಮಂತ್ರಿ ನೆರೆಹೊರೆಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ನಡೆಸಿದರೆ ಅದು ರಾಜ್ಯದ ಹಿತಕ್ಕೆ ಸಂಬಂಧಿಸಿದ ಪ್ರಶ್ನೆಯಾಗಿರುವಾಗ ಅದರ ಬಗ್ಗೆ ತಕ್ಷಣ ಸದನದಲ್ಲಿ ಮಂತ್ರಿಗಳು ಹೇಳಿಕೆ ಕೊಡತಕ್ಕ ಪರಿಪಾಠ, ಸಂಪ್ರದಾಯ ಬೆಳೆದುಬಂದಿದೆ. ನೂರಾರು ಘಟನೆಗಳು ಅಂಥದ್ದು ನಡೆದಿವೆ. ಮುಖ್ಯಮಂತ್ರಿಗಳೇ ಸ್ವತಃ ಮುಂದೆ ಬಂದು ಹೇಳಿಕೆ ಕೊಡಬೇಕಾಗಿತ್ತು. He ought to have taken into confidence the entire House, which he has not done. That is my point ಬಿಸಿನೆಸ್ ಅಡ್ವೈಸರಿ ಕಮಿಟಿ ೮ ದಿವಸದ ಮೇಲೆ ಸೇರತಕ್ಕದ್ದು. ಅಷ್ಟರೊಳಗೆ ವಿಷಯದ ಪ್ರಾಮುಖ್ಯತೆ ಹೋಗುತ್ತದೆ. ಸದನ ಸೇರಿ ಎಷ್ಟು ದಿವಸ ವಾಯಿತು ಎಂಬುದು ತಮಗೆ ಗೊತ್ತಿದೆ. ಸದನ ಸೇರಿದ ಮೊದಲ ದಿವಸ ಅಥವಾ ಎರಡನೇ ದಿವಸವೇ ಈ ಬಗ್ಗೆ ಮುಂಖ್ಯಮಂತ್ರಿಗಳು ಹೇಳಿಕೆ ಕೊಡಬೇಕಾಗಿತ್ತು. ಮಾತುಕತೆಗಳು ಪ್ರಗತಿಯಾಗಿದೆಯೇ ಅಥವಾ ಯಾವ ಹಂತದಲ್ಲಿದೆ ಎಂಬುದನ್ನು ಸದನಕ್ಕೆ ತಿಳಿಸಬೇಕಾಗಿತ್ತು. ಅದನ್ನು ತಿಳಿದುಕೊಳ್ಳುವ ಹಕ್ಕು ಸದನಕ್ಕಿದೆ.

ಅಧ್ಯಕ್ಷರು.—ನೀವು ಗಮನ ಸೆಳೆದಿದ್ದೀರಿ. ಅದನ್ನು ಚರ್ಚೆ ಮಾಡೋಣ

ಶ್ರೀ ಎಸ್. ಬಂಗಾರಪ್ಪ.—ಯಾರ ಜೊತೆ ಚರ್ಚೆ ಮಾಡಬೇಕು, ಯಾರ ಜೊತೆ ತೀರ್ಮಾನ ಮಾಡಬೇಕು?

ಅಧ್ಯಕ್ಷರು.—ನೋಟೀಸ್ ಕೊಟ್ಟ ತಕ್ಷಣ ಎಲ್ಲ ವಿಚಾರವನ್ನೂ ಪ್ರಸ್ತಾಪ ಮಾಡಿ ಬಗೆಹರಿಸುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನೋಟೀಸ್ ಕೊಟ್ಟು ಆದಮೇಲೆ ಎರಡನೇ ದಿವಸದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ.

ಅಧ್ಯಕ್ಷರು.—ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ವಿಷಯವನ್ನಿಟ್ಟು ಸಮಯವನ್ನು ನಿಗದಿ ಮಾಡಬೇಕಾಗುತ್ತದೆ. ತಾವು ಬಹಳ ಹಳೆಯ ಸದಸ್ಯರು ತಮಗೆ ವಿಚಾರಗಳು ಗೊತ್ತಿದೆ. ಈಗ ಅಜೆಂಡಾದಲ್ಲಿ ಬಹಳ ಪ್ರಾಮುಖ್ಯವಾದ ವಿಚಾರಗಳು ಬಂದಿವೆ. ಆ ಕಾರ್ಯಕಲಾಪಗಳು ನಡೆಯುವುದಕ್ಕೆ ಅವಕಾಶ ಕೊಡಿ ಎಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಎಲ್ಲವೂ ಪ್ರಾಧಾನ್ಯ ಎಂಬ ಭಾವನೆಯಿಂದ ಕೆಲಸ ಮಾಡುತ್ತಿದ್ದೇವೆ. ಯಾವುದೇ ಒಬ್ಬ ಸದಸ್ಯ ಮಾತನಾಡಿದರೂ ಅದಕ್ಕೆ ಬೆಲೆ ಇದೆ. ಆದರೆ ಮುಖ್ಯವಾದ ಅಂಶಗಳ ಬಗ್ಗೆ ಸರ್ಕಾರ ಕಡೆಗಣಿಸತಕ್ಕ ಈ ನೀತಿ ಸರಿಯಲ್ಲ. ನಾನು ಮಾನ್ಯ ಅಧ್ಯಕ್ಷರ ಬಗ್ಗೆ ಮಾತನಾಡುತ್ತಿಲ್ಲ. ತಾವು ನಮ್ಮನ್ನು ಅರ್ಥ ಮಾಡಿಕೊಳ್ಳಬೇಕು. ಇಂಥ ಗಹನವಾದ, ಜರೂರಾದ ವಿಚಾರಗಳ ಬಗ್ಗೆ ತಡ ಮಾಡಿದರೆ ಪರಿಣಾಮ ಏನಾಗುತ್ತದೆ ಎಂಬುದು ತಪ್ಪಗೆ ಗೊತ್ತಿದೆ, ಆದರ ಬಗ್ಗೆ ಹೆಚ್ಚಿಗೆ ನಾನು ಹೇಳುವುದಿಲ್ಲ. ಈ ಸಮಸ್ಯೆಗೆ ತಕ್ಷಣ ಉತ್ತರ ಕೊಡತಕ್ಕ ಸಾಮರ್ಥ್ಯತೆಯನ್ನು ಸರ್ಕಾರ ತೋರಿಸಬೇಕು. ಇದು ತಮ್ಮ ಕೈಯಲ್ಲಿಲ್ಲ ಎಂಬುದನ್ನು ನಾನು ಒಪ್ಪುತ್ತೇನೆ. ನಿನ್ನೆ ಈ ವಿಷಯ ಪ್ರಸ್ತಾಪ ಮಾಡಿದಾಗ ಇವತ್ತು ಈ ವಿಷಯ ಸದನದ ಮುಂದೆ ಬರಬಹುದು ಎಂದು ತಿಳಿದುಕೊಂಡಿದ್ದೆ, ಮುಖ್ಯಮಂತ್ರಿಗಳು ಸಭೆಗೆ ಬಂದಿದ್ದರೂ ಕೂಡ ಏನೂ ಹೇಳಲಿಲ್ಲ. ಇದು ಪ್ರಾಮುಖ್ಯವಾದ ವಿಚಾರ ಎಂದು ಹೇಳಿದರೂ ಸರ್ಕಾರದವರು ಗಮನ ಕೊಡದೆ ಸದನದಲ್ಲಿ ಸಮ್ಮನೆ ಕುಳಿತು ಹೋದರೆ ನಾವೇನು ತಿಳಿದುಕೊಳ್ಳಬೇಕು? ಗಡಿ ವಿಚಾರ, ರೈತರ ಚಳುವಳಿ ವಿಚಾರ ಎಲ್ಲವೂ ಇದೆ. ರೈತರನ್ನೂ ದಿನಾ ಅರೆಸ್ಟ್ ಮಾಡುತ್ತಿದ್ದಾರೆ. ವಿಧಾನಸೌಧದ ಸುತ್ತಲೂ ೧೫ನೇ ಸೆಕ್ಷನ್ ಜಾರಿ ಮಾಡಿದ್ದಾರೆ. ರಾಜ್ಯದ ಜನರು ಗಲಾಟೆ ಮಾಡುತ್ತಿದ್ದಾರೆ. ಇದನ್ನೆಲ್ಲಾ ಚರ್ಚೆ ಮಾಡುವುದಕ್ಕೆ ಬಿಸಿನೆಸ್ ಅಡ್ವೈಸರಿ ಕಮಿಟಿ ಕರೆಯುವುದಕ್ಕಾಗುತ್ತಯೇ?

ಅಧ್ಯಕ್ಷರು.—ಇಂಥ ವಿಷಯಗಳಲ್ಲಿ ತಕ್ಷಣ ಉತ್ತರ ಕೊಡುವುದಕ್ಕೆ ಯಾವುದೇ ಸರ್ಕಾರಕ್ಕೂ ಸಾಧ್ಯವಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಏತಕ್ಕಾಗುವುದಿಲ್ಲ?

ಅಧ್ಯಕ್ಷರು.—ಮುಂದಿನ ಬಿಸಿನೆಸ್‌ಗೆ ಹೋಗೋಣ.

ಶ್ರೀ ಎಸ್. ಬಂಗಾರಪ್ಪ.—ಮುಂದಿನ ಕೆಲಸ ಕಾರ್ಯಗಳು ನಡೆಯುತ್ತಿರಲಿ. ಈ ದಿನದ ಕಾರ್ಯಕಲಾಪಗಳು ಮುಗಿಯುವ ಹೊತ್ತಿಗೆ ಸ್ಟೇಟ್‌ಮೆಂಟ್ ಮಾಡಲಿ.

ಅಧ್ಯಕ್ಷರು.—ನಾನು ನೋಡುತ್ತೇನೆ.

ಶ್ರೀ ವೈ. ಕೆ. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ನಾವೂ ಹಿಂದುಗಡೆ ಕುಳಿತಿರುವ ಸದಸ್ಯರಾಗಿದ್ದೇವೆ. ಆದರೆ ನಾವಿರುವುದು ಅಧ್ಯಕ್ಷರು ಮತ್ತು ಒಬ್ಬ ಸದಸ್ಯರ ನಡುವೆ ನಡೆಯುವ ವಾಗ್ಯುದ್ಧವನ್ನು ನೋಡುತ್ತಾ ಕುಳಿತಿರುವುದಕ್ಕಲ್ಲ.

೧-೦೦ ಪಿ. ಎಂ.

ಗಮನ ಸೆಳೆಯುವ ಸೂಚನೆಗಳು

ವಿಜಾಪುರ ತಾಲ್ಲೂಕಿನ ತೆಂಗಳ್ಳಿಯಲ್ಲಿ ಹರಿಜನರ ಮೇಲೆ ನಡೆಯಿತೆನ್ನಲಾದ ದೌರ್ಜನ್ಯದ ಬಗ್ಗೆ

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ವಿಜಾಪುರ ತಾಲ್ಲೂಕಿನ ತೆಂಗಿಪಳ್ಳಿಯಲ್ಲಿ ಹರಿಜನರ ಮೇಲೆ ನಡೆಯಿತೆನ್ನಲಾದ ದೌರ್ಜನ್ಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.